[ಉಪಾಧ್ಯಕ್ಷಿಣಿಯವರಾದ (ಶ್ರೀಮತಿ ನಾಗಮ್ಮ ಕೇಶವಮೂರ್ತಿಯರು) ಅಧ್ಯಕ್ಷಪೀಠವನ್ನು ಅಲಂಕರಿಸಿದರು]

ಶ್ರೀ ಬಿ.ಎಸ್. ಯಡಿಯೂರಪ್ಪ:– (ಶಿರಾಳಕೊಪ್ಪ) ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಸಚಿವ ಸಂಪುಟದ ಮಂತ್ರಿಗಳೆಲ್ಲರೂ ಬೆಂಗಳೂರಿನಲ್ಲಿರುವಾಗ ಅವರವರ ಚೇಂಬರ್‌ನಲ್ಲಿ ಇರುತ್ತಾರೆ. ಸಾರ್ವಜನಿಕರು ಅದರ ಉಪಯೋಗವನ್ನು ಪಡೆದುಕೊಳ್ಳಬಹುದೆಂದು ಹೇಳಿದ್ದರು. ಆದರೆ ಅಧಿವೇಶನ ನಡೆಯುವ ಈ ದಿನಗಳಲ್ಲಿ ಮಾನ್ಯ ಸಚಿವರುಗಳು ಸಭೆಗೇ ಹಾಜರಿರದ ಪರಿಸ್ಥಿತಿಯು ಬಂದಿದೆ.

ಉಪಾಧ್ಯಕ್ಷಿಣಿಯವರು:– ಮುಖ್ಯಮಂತ್ರಿಯವರು ಬರುತ್ತಾ ಇದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:– ಈಗ ವಿಧಾನಸಭೆಯು ನಡೆಯುತ್ತಾ ಇದೆ. ಹಾಗಿದ್ದ ಮೇಲೆ 14 ಜನ ಸಚಿವರಲ್ಲಿ 4–5 ಜನ ಸಚಿವರಾದರೂ ಇಲ್ಲಿ ಹಾಜರಿರುವುದು ಬೇಡವೆ ? ಐದಾರು ಜನ ಮಾನ್ಯ ಸಚಿವರುಗಳು ಕೂಡ ಸಭೆಯಲ್ಲಿ ಹಾಜರಿರದಿದ್ದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್:– ಈಗ ಸಂಪುಟದ 14 ಜನ ಮಾನ್ಯ ಸಚಿವರುಗಳು ಇದ್ದಾರೆ. ಮುಖ್ಯಮಂತ್ರಿಗಳೂ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವರಲ್ಲಿ ಪರಸ್ಪರ ಗೊಂದಲ ಏನಾದರೂ ಇದೆಯೇ ?

ಶ್ರೀ ವಾಟಾಳ್ ನಾಗರಾಜ್:– ಇಲ್ಲಿ ಈ ಸದನದಲ್ಲಿ ಇಬ್ಬರು ಸಚಿವರು ಇದ್ದಾರೆ. ಆ ಸದನದಲ್ಲಿಯೂ ಯಾವ ಸಚಿವರನ್ನೂ ಕಾಣೆ. ಹಾಗಾದರೆ ಸಚಿವರುಗಳು ಎಲ್ಲಿಗೆ ಹೋಗಿದ್ದಾರೆ ? ಏನು ಪರಿಸ್ಥಿತಿ ನಿರ್ಮಾಣವಾಗಿದೆ ? ಎರಡೇ ದಿವಸಗಳಲ್ಲಿ ಈ ಪರಿಸ್ಥಿತಿ ಹೀಗೆ ನಿರ್ಮಾಣವಾದರೆ ಹೇಗೆ ? ಏನಾದರೂ ಗೊಂದಲದ ವಿಚಾರ ಇರಬಹುದೆ ? ಅದೇ ರೀತಿಯಲ್ಲಿ ನಿಮ್ಮ ಪಕ್ಷದ ಸದಸ್ಯರು ಕೂಡ ಎಲ್ಲಿ ಹೋಗಿದ್ದಾರೆ ? ಒಟ್ಟು 10–15 ಜನರು ಕೂಡ ಇಲ್ಲ. ಏಕೆ ಹೀಗೆ ಗೊಂದಲ ಉಂಟಾಗಿದೆ ? ಎರಡೇ ದಿನಗಳಲ್ಲಿ ಇಂಥ ಪರಿಸ್ಥಿತಿಯಾದರೆ ಹೇಗೆ ?

ಉಪಾಧ್ಯಕ್ಷಿಣಿಯವರು:– ಅವರುಗಳು ಬರುತ್ತಾರೆ, ನಾವು ಇಲ್ಲಿ ಚರ್ಚೆ ಪ್ರಾರಂಭ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅವರಲ್ಲಿ ಏನೋ ಗೊಂದಲ ಉಂಟಾದ ಹಾಗೆ ಕಾಣುತ್ತದೆ.....

ಶ್ರೀ ವಾಟಾಳ್ ನಾಗರಾಜ್:– ಅವರೊಳಗೆ ಸರಕಾರದ ಪರ ಮತ್ತು ವಿರುದ್ಧವಾಗಿ ಏನೋ ಗೊಂದಲವಾಗಿ ಒಂದು ರೀತಿಯಲ್ಲಿ ಯುದ್ಧ ನಡೆದಿದೆ ಎಂದು ಕಾಣುತ್ತದೆ. ಪರಿಸ್ಥಿತಿಯು ಹದಗೆಟ್ಟಿದೆ, ನೀವುಗಳು ಹೊಸದಾಗಿ ಅಧಿಕಾರಕ್ಕೆ ಬಂದಾಗ ಜನರಿಗೆ ಏನೆಲ್ಲಾ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ ? ಒಳ್ಳೆಯ ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ ಮುಖ್ಯ ಮಂತ್ರಿಗಳು ಸದನದಲ್ಲಿ ಇಲ್ಲ. ಐದು ನಿಮಿಷ ಬರುತ್ತಾರೆ ಹೋಗುತ್ತಾರೆ. ಅವರು ಸಚಿವರಾಗಿ ಇದ್ದಾಗ ತಮ್ಮದೇ ಆದ ರೀತಿಯಲ್ಲಿ ಬಹಳ ಚೆನ್ನಾಗಿ ಉಪಸ್ಥಿತರಿದ್ದು ಕೆಲಸವನ್ನು ನಿರ್ವಹಿಸುತ್ತಾ ಇದ್ದರು. ಅವರ ಬಗ್ಗೆ ನಮಗೆಲ್ಲಾ ಅಪಾರ ಗೌರವ ಇತ್ತು. ಈಗ ಹೀಗೆ ಏಕೆ ?

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಸನ್ಮಾನ್ಯ ಅಧ್ಯಕ್ಷರೇ, ಆಯೋಧ್ಯೆಯಲ್ಲಿ ನಡೆದ ಘಟನೆ ಯಾವುದೇ ದೃಷ್ಟಿಯಿಂದ ನೋಡಿದರೂ ಖಂಡನಾರ್ಹವಾದುದು. ಕೇವಲ ಈ ಸದನದಲ್ಲಿರುವ 224 ಜನ ಒಂದು ನಿರ್ಣಯ ಅಂಗೀಕಾರ ಮಾಡಿ ಈ ಘಟನೆ ಕೃತ್ಯವನ್ನು ಹೀನಾಯವಾದುದು ನಾಚಿಕೆಪಡುವಂತಹುದು ಎಂದು ಅಂಗೀಕಾರ ಮಾಡಿದರೆ ಆಗಿರುವ ಇರ್ರಿಪೇರಬಲ್ ಡ್ಯಾಮೇಜ್ ಟು ದಿ ಸೆಕ್ಯುಲರ್ ಕ್ಯಾರೆಕ್ಟರ್ ಆಫ್ ಎ ಕಂಟ್ರಿ, ಮತ್ತೆ ಸಂವಿಧಾನಕ್ಕೆ ಎಸಗಿರುವ ಅಪಚಾರ

ಸರಿಮಾಡಲಿಕ್ಕೆ ಸಾಧ್ಯ ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ನಿರ್ಣಯ ಮಾಡುವುದರಿಂದ ಭಾಷಣ ಮಾಡುವುದರಿಂದ ಒಂದು ಕೆಟ್ಟ ನಂಬಿಕೆ ಪದ್ಧತಿ ವ್ಯವಸ್ಥೆಯನ್ನು ನಿರ್ಮೂಲ ಮಾಡಲು ಸಾಧ್ಯವೆಂದು ನಾನು ಭಾವಿಸಿಕೊಳ್ಳುವುದಿಲ್ಲ. ಈ ಒಂದು ಹೀನಕೃತ್ಯ ಇದನ್ನು ನಾನು ಇನ್ನೂ ಮುಂದಕ್ಕೆ ತೆಗೆದುಕೊಂಡು ಹೋಗುತ್ತೇನೆ- ಈ ಘೋರ ಅಪರಾಧ ಕಾನೂನಿನ ದೃಷ್ಟಿಯಿಂದ ನಡೆದ ಈ ಘೋರ ಅಪರಾಧ ನಡೆದಂತಹ ಸ್ಥಳಕ್ಕೆ ಯಾವುದಾದರೂ ಕಾನೂನಿತ್ತೇ, ಆ ಕಾನೂನನ್ನು ಜಾರಿಗೆ ತರುವಂತಹ, ಅಪರಾಧವನ್ನು ತಡೆಯಲಿಕ್ಕೆ ಕರ್ತವ್ಯ ಹೊಂದಿದ್ದಂತಹ ವ್ಯವಸ್ಥೆ ಏನಾದರೂ ಇತ್ತೆ ? ಇದಕ್ಕೆ ಉತ್ತರ ಇತ್ತು ಎಂದು ಹೇಳಬೇಕಾಗುತ್ತದೆ. There was a Government headed by Sri Kalyan Singh which was legally constituted under the Constitution, The question is whether this legally constituted Government has discharged legitimate duties to protect the people and the country. ಅದು ಹಿಂದುಗಳದೋ ಮಹಮದೀಯರದೋ ಕ್ರಿಶ್ಚಿಯನ್ನರದೋ ಬೌದ್ಧರದೋ ಅನ್ನುವ ಪ್ರಶ್ನೆ ಇಲ್ಲಿ ಬೇಡ. ಕಾನೂನಿನ ಪ್ರಕಾರ ಅಸ್ತಿತ್ವಕ್ಕೆ ಬಂದಿರುವ ಸಂವಿಧಾನದ ಕೂಸಾದಂತಹ ಒಂದು ಸರ್ಕಾರ ತಾನು ಮಾಡಬೇಕಾಗಿದ್ದ ಕರ್ತವ್ಯ ತಾನು ಮಾಡಿದೆಯೇ ? ಎಂದು ಅತ್ಯಂತ ನೋವಿನಿಂದ ಹೇಳುತ್ತೇನೆ, ಅವೊತ್ತು ಅಸ್ತಿತ್ವದಲ್ಲಿದ್ದ ಉತ್ತರಪ್ರದೇಶದ ರಾಜ್ಯಸರ್ಕಾರ ತನ್ನ ನಡವಳಿಕೆಯಿಂದ ಕರ್ತವ್ಯಚ್ಯುತಿ ಮಾಡಿದೆ, ಸಂವಿಧಾನಕ್ಕೆ ಅಪಚಾರವನ್ನು ಮಾಡಿದೆ. ಈ ಅಪಚಾರ ಕರ್ತವ್ಯಚ್ಯುತಿಗಾಗಿ ಕಲ್ಯಾಣ್‌ಸಿಂಗರು ರಾಜೀನಾಮೆ ಕೊಟ್ಟಾದ ಮೇಲೆ ಈ ಸರ್ಕಾರವನ್ನು ಡಿಸ್‌ಮಿಸ್ ಮಾಡಿದ್ದುದು ಅದು ಸಮರ್ಪಕವೋ ಅಲ್ಲವೋ ಕಾನೂನಿನ ದೃಷ್ಟಿಯಿಂದ ಅದು ಒಳಿತೋ ಕೆಡುಕೋ ಬೇರೆ ವಿಷಯ. ಆದರೆ ಒಂದು ಅಪರಾಧ ಒಂದು ಅಕೃತ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಒಂದು ಘೋರ ಘಟನೆ ನಡೆಯುತ್ತಿದ್ದ ಸಂದರ್ಭದಲ್ಲಿ ಅದನ್ನು ತಡೆಯಲಿಕ್ಕೆ ಪ್ರಯತ್ನ ಮಾಡದೇ ಹೋದಂತಹ ಹೀನಪ್ರವೃತ್ತಿ ಯಾವುದೇ ಸರ್ಕಾರ ಮಾಡಿದರೂ ಅದನ್ನು ಖಂಡಿಸಬೇಕಾಗುತ್ತದೆ. ಸಾವಿರಾರು ಲಕ್ಷಾಂತರ ಜನ ಅಲ್ಲಿ ಅಪರಾಧ ಮಾಡುತ್ತಿದ್ದಾರೆ, ಒಂದು ಕಟ್ಟಡವನ್ನು ಕೆಡವುತ್ತಿದ್ದಾರೆ. ಆ ಕಟ್ಟಡ disputed structure ವಿವಾದಾತ್ಮಕ ಕಟ್ಟಡ ಆದಾಗ್ಯೂ ಅಲ್ಲಿ ಶ್ರೀ ರಾಮಚಂದ್ರ ಜನಿಸಿದ್ದಾಗ್ಯೂ ಕೂಡ ಅಲ್ಲಿ ಶ್ರೀರಾಮನ ದೇವಸ್ಥಾನ ಇತ್ತೆಂದು ಇಷ್ಟೆಲ್ಲ ಇತ್ತೆಂದು ಭಾವಿಸಿದ್ದರೂ ಕೂಡ Assuming for argument sake, that is a disputed structure, it can be done under the due process of law. ಕಾನೂನು ಚೌಕಟ್ಟಿನಲ್ಲಿ ಆ ಕಟ್ಟಡವನ್ನು ತೆಗೆಯಬೇಕೆ ಹೊರತು ಯಾರೋ ಮೂರನೆಯವರು ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇಂತಹ ಒಂದು ಅಕೃತ್ಯ ನಡೆಯುವಾಗ ಅದನ್ನು ತಡೆಯುವಲ್ಲಿ ವಿಫಲವಾದ ಉತ್ತರಪ್ರದೇಶ ಸರ್ಕಾರ ತನ್ನ ಕರ್ತವ್ಯಚ್ಯುತಿ ಮಾಡಿದೆ. ಅದು ಅಲ್ಲಿಗೇ ನಿಲ್ಲಲಿಲ್ಲ. ಕರ್ತವ್ಯಚ್ಯುತಿಗೆ ಅಥವಾ ಸಂವಿಧಾನದ ಅಪಚಾರಕ್ಕೆ.ಈ ಸರ್ಕಾರ ನ್ಯಾಯಾಂಗಕ್ಕೆ ಕೂಡ ಅಪಚಾರ ಮಾಡಿದೆ. ಉತ್ತರಪ್ರದೇಶದ ಸರ್ಕಾರ ಉಚ್ಚನ್ಯಾಯಾಲಯದಲ್ಲಿ ವಿವಾದ ನಡೆಯತಕ್ಕಂಥ ಸಂದರ್ಭದಲ್ಲಿ ಅಲ್ಲಿ ಕರಸೇವೆಯನ್ನು ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಡುವುದಿಲ್ಲ ಎನ್ನುವಂಥ ಒಪ್ಪಂದವನ್ನು ಅಂಡರ್‌ಟೇಕಿಂಗ್ಸ್ ಉಚ್ಚನ್ಯಾಯಾಲಯದಲ್ಲಿ ಕೊಟ್ಟರು. ಮುಚ್ಚಳಿಕೆಯನ್ನು ಕೊಟ್ಟರು, ತನ್ನ ವಕೀಲರ ಮುಖಾಂತರ. ಉಚ್ಚನ್ಯಾಯಾಲಯ ಕೊಟ್ಟಂಥ ಮುಚ್ಚಳಿಕೆಯನ್ನು ಮುರಿಯುವುದರ ಮುಖಾಂತರ ಈ ರಾಷ್ಟ್ರದ ಅತ್ಯುನ್ನತವಾದಂಥ ನ್ಯಾಯಾಲಯಕ್ಕೆ ಅಪಮಾನ ಮಾಡಿದೆ. ಚ್ಯುತಿ ತಂದಿದೆ ನ್ಯಾಯಕ್ಕೆ. ಒಬ್ಬ ವ್ಯಕ್ತಿ ಕಾನೂನನ್ನು ಮುರಿದರೆ, ಆತನಿಗೆ ಶಿಕ್ಷೆ ಇದೆ. ಇಂಥ ಘೋರ ಅಪರಾಧವನ್ನು ಮಾಡುವುದನ್ನು ತಡೆಯುವುದಕ್ಕೆ ಸಾಧ್ಯ ಇಲ್ಲದೇ ಇರತಕ್ಕಂಥ ಸರ್ಕಾರಕ್ಕೆ ನ್ಯಾಯಾಲಯ ಕೊಟ್ಟಿರುವ ಮುಚ್ಚಳಿಕೆಯನ್ನು ಮುರಿದಂಥ ಅಪರಾಧಕ್ಕೆ ಆ ಸರ್ಕಾರಕ್ಕೆ ಯಾವ ಕಾನೂನಿನಲ್ಲಿ ಯಾವ ಶಿಕ್ಷೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಇವತ್ತು. ಸಂವಿಧಾನಕ್ಕೆ,

ನ್ಯಾಯಕ್ಕೆ ಅಷ್ಟೇ ಅಪಚಾರ ಎಸಗಲಿಲ್ಲ ಈ ಜನ. ಯಾವ ಜನ ಸಾಮಾನ್ಯರು ತಮ್ಮ ಒಳಿತಿಗಾಗಿ ತಮ್ಮ ಉತ್ತಮ ಬದುಕಿಗಾಗಿ ಸರ್ಕಾರವನ್ನು ರಚನೆ ಮಾಡಿಕೊಳ್ಳುವ ನಂಬಿಕೆಯನ್ನು ಉತ್ತರಪ್ರದೇಶದ ಸರ್ಕಾರದಲ್ಲಿ ತೋರಿದರೋ ಆ ನಂಬಿಕೆಗೆ ದ್ರೋಹ ಬಗೆದಿದ್ದಾರೆ. ಜನಗಳು ಮತಗಳನ್ನು ಕೊಟ್ಟು ಸರ್ಕಾರಗಳನ್ನು ನೇಮಕ ಮಾಡುವುದು, ಸರ್ಕಾರಗಳನ್ನು ಆರಿಸುವುದು ಅಸ್ತಿತ್ವಕ್ಕೆ ಬರುವುದು ಜನರ ಕೆಲಸ ಮಾಡುವುದಕ್ಕಾಗಿ. ಜನರ ದುಃಖದುಮ್ಮಾನಗಳನ್ನು, ಜನರ ಕಷ್ಟಸುಖಗಳನ್ನು ವಿಚಾರಿಸುವುದಕ್ಕಾಗಿ. ಅಂಥ ನಂಬಿಕೆ ಇಟ್ಟಂಥ ಜನರಿಗೆ ಅನ್ಯಾಯವನ್ನು ಮಾಡಿದ್ದಾರೆ. ದ್ರೋಹವನ್ನು ಬಗೆದಿದ್ದಾರೆ.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಮಾನ್ಯ ಸದಸ್ಯರಾದ ಡಿ.ಎ. ಚಿನ್ನಪ್ಪನವರು ಅಲಂಕರಿಸಿದರು)

ಈ ಹಿಂದೂ ರಾಷ್ಟ್ರದ ಪರಿಕಲ್ಪನೆ, ರಾಮರಾಜ್ಯದ ಕನಸು, ಬಹುಶಃ, ನಮ್ಮ ಕಾವ್ಯಗಳಲ್ಲಿ ಕಂಡಂಥ ಶ್ರೀರಾಮನ ರಾಮರಾಜ್ಯ ಬರುವುದಾದರೆ ಅಂಥ ರಾಮರಾಜ್ಯ ನಮಗೆ ಬೇಕಾಗಿಲ್ಲ. ಹುಟ್ಟಿದ ಆಧಾರದ ಮೇಲೆ ನಮ್ಮ ಅಧಿಕಾರಿಗಳನ್ನು ನಿರ್ಣಯ ಮಾಡುವಂಥ ಶ್ರೀರಾಮ ಬರುವುದಾದರೆ ಅಂಥ ರಾಜ್ಯ ಬರುವುದಾದರೆ ನಮಗೆ ಬೇಕಾಗಿಲ್ಲ. ಈ ಹಿಂದೂ ರಾಷ್ಟ್ರ ಪರಿಕಲ್ಪನೆ ಉಳ್ಳಂಥ ಜನ ನಾನು ಈಗಾಗಲೇ ಹೇಳಿದ ಹಾಗೆ ಕಾನೂನು, ಧರ್ಮ, ಸಂವಿಧಾನ ಇವೆಲ್ಲವನ್ನೂ ನಾಶ ಮಾಡಿದೆ. ಇದರ ಪರಿಣಾಮವೇನು ? ನಡೆದಂಥ ಘಟನೆ ಅದು ಮತೀಯ ಭಾವನೆಯ ಮತ್ತೇರಿದಂಥ ಜನರ ಹುಚ್ಚಾಟ ಇರಬಹುದು. ಹಿಂದೂ ರಾಷ್ಟ್ರದ ಪರಿಕಲ್ಪನೆ ಇಟ್ಟುಕೊಂಡಿರುವಂಥ ರಾಜಕೀಯ ದಾಹದ ಒಂದು ಕೆಲಸ ಇರಬಹುದು. ಆದರೆ ಈ ನಡೆದಂಥ ಘಟನೆಯಿಂದ, ನಡೆದಂಥ ಕೃತ್ಯದಿಂದ ಈ ನಾಚಿಕೆಗೇಡು ಪ್ರಸಂಗದಿಂದ ಈ ರಾಷ್ಟ್ರದಲ್ಲಿ, ಈ ಪ್ರಪಂಚದಲ್ಲಿ ಆದಂಥ ಪರಿಣಾಮದ ಬಗ್ಗೆ ನಾವು ಆಲೋಚನೆ ಮಾಡಬೇಕು. ಮೊಟ್ಟಮೊದಲನೆಯ ಪರಿಣಾಮ ನಮ್ಮ ಹಿರಿಯ ಸದಸ್ಯರಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತುಂಬಾ ಚೆನ್ನಾಗಿ ಹೇಳಿದರು. It is not the question of demolition of Mosque. It is the question of demolition of the prestige of the country at the international level. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ರಾಷ್ಟ್ರಕ್ಕೆ ಏನು ಜಾತ್ಯಾತೀತ ರಾಷ್ಟ್ರ ಸೆಕ್ಯುಲರ್ ಸ್ಟೇಟ್ ಇಲ್ಲಿ ಎಲ್ಲರೂ ಒಂದಾಗಿ ಬಾಳುತ್ತಾರೆ ಎನ್ನುವಂಥ ನಂಬಿಕೆ ಇತ್ತೋ, ಆ ನಂಬಿಕೆಯನ್ನು ನಾಶ ಮಾಡಿದಂಥ ಒಂದು ದುಷ್ಕೃತ್ಯ ಇದು. ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರಕ್ಕೆ ಮಸಿಯನ್ನು ಬಳಿದಂಥ ಒಂದು ಕೃತ್ಯ ಇದು. ಇನ್ನು ರಾಷ್ಟ್ರಮಟ್ಟದಲ್ಲಿ ಆದಂಥ ಪರಿಣಾಮ ಎಷ್ಟು ಘೋರವಾದುದು. ಸನ್ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದೆ, ಈ ವಿಶ್ವದಲ್ಲಿ ಯಾವುದೇ ಒಂದು ಧರ್ಮ, ಯಾವುದೇ ಒಂದು ನೀತಿ, ಯಾವುದೇ ಒಂದು ನ್ಯಾಯ ಅಥವಾ ಯಾವುದೇ ಒಂದು ಕಾನೂನು ಒಬ್ಬ ಮನುಷ್ಯನನ್ನು ವಿನಾಕಾರಣಕ್ಕಾಗಿ ಮತ್ತೊಬ್ಬ ಮನುಷ್ಯನನ್ನು ಕೊಲ್ಲುವಂಥದ್ದನ್ನು ಫ್ರೀಚ್ ಮಾಡುವ ಯಾವುದೇ ಧರ್ಮ ಇಲ್ಲ. ಮಹಾತ್ಮಾಗಾಂಧಿ ಇರಬಹುದು, ಏಸು ಕ್ರಿಸ್ತ ಇರಬಹುದು ಬುದ್ಧ ಇರಬಹುದು. ಯಾರೇ ಆಗಿರಲಿ, ಒಬ್ಬ ಮನುಷ್ಯ ವಿನಾ ಕಾರಣ ಮತ್ತೊಬ್ಬ ಮನುಷ್ಯನನ್ನು ದ್ವೇಷ ಮಾಡಬೇಕು ಹೇಟ್ ಮಾಡಬೇಕು, ಅಸೂಯೆ ಪಡಬೇಕು, ಎಂದು ಬೋಧನೆ ಮಾಡುವ ಯಾವುದೇ ಧರ್ಮ ಇಲ್ಲ. ಯಾವುದೇ ಧರ್ಮ ಪ್ರಬೋಧಕರು ಇಲ್ಲ. ಆದ್ದರಿಂದ ಪರಿಣಾಮ ಅತ್ಯಂತ ಹೀನಾಯ. ಸಾವಿರಾರು ಜನರು ತಮ್ಮ ಪ್ರಾಣವನ್ನು ತೆತ್ತಿದ್ದಾರೆ. ಆ ಅಂಧ ಕವಿಗಳು ಹೇಳುವ ಹಾಗೆ ತಂದೆಯನ್ನು ಕಳೆದುಕೊಂಡಂತಹ ಮಕ್ಕಳು, ಮಕ್ಕಳನ್ನು ಕಳೆದುಕೊಂಡಂತಹ ತಂದೆಯರು, ಅಕ್ಕತಂಗಿಯರ ಮುಖದಲ್ಲಿ ನಿಮ್ಮ ರಾಮ ಕಾಣುವುದಿಲ್ಲ, ನಿಮ್ಮ ರಹೀಮ ಕಾಣುವುದಿಲ್ಲ, ನಿಮ್ಮ ಮಾರಮ್ಮ ಕಾಣುವುದಿಲ್ಲ, ನಿಮ್ಮ ಪಟಾಲಮ್ಮ ಕಾಣುವುದಿಲ್ಲ, ನಿಮ್ಮ ಭೂತ ಕಾಣುವುದಿಲ್ಲ.. ಅವರ ಮುಖದಲ್ಲಿ ಕಾಣುವುದು ಒಂದೇ. ಅದು ಮನುಷ್ಯತ್ವ. ತಂದೆಯನ್ನು ಕಳೆದುಕೊಂಡ ಮಗನ ಮುಖದಲ್ಲಿ ಕಾಣುವುದು ಒಂದು ಮನುಷ್ಯತ್ವ, ತಾಯಿಯನ್ನು

ಕಳೆದುಕೊಂಡಂತಹ ಮಗಳ ಮುಖದಲ್ಲಿ ಕಾಣುವುದು ಒಂದೇ ಒಂದು ಶಕ್ತಿ. ಸಾವಿರಾರು ಜನ ತಮ್ಮ ಅಸುವನ್ನು ನೀಗಿದರು. ಏತಕ್ಕಾಗಿ ನೀಗಿದರು. ರಾಷ್ಟ್ರ ರಕ್ಷಣೆಯ ನೆಪದಲ್ಲಿ ಜನರನ್ನು ಕೊಲ್ಲುವುದು ಅದೂ ಕೂಡ ಒಂದು ಪಾಪ. ಅದೂ ಆಗಿಲ್ಲ. ದೇಶದ ರಕ್ಷಣೆ ಇಲ್ಲ. ಧರ್ಮದ ರಕ್ಷಣೆ ಇಲ್ಲ. ನ್ಯಾಯದ ರಕ್ಷಣೆಗಾಗಿ ಅಲ್ಲ. ಇವೆಲ್ಲವೂ ಬೇಡ ಎಂದರೆ ಮನುಷ್ಯನಿಗೆ ಒಳ್ಳೆಯದಾಗುವಂತಹ ಒಂದು ಜನಪರ ಕಲ್ಯಾಣದ ಕೆಲಸವೂ ಇಲ್ಲ. ಇದು ಯಾವುದೂ ಇಲ್ಲದೇ ಇದ್ದಾಗ ಒಂದೇ ಕಾರಣಕ್ಕಾಗಿ, ಅವನು ಅಲ್ಪ ಸಂಖ್ಯಾತ, ಕೊಲ್ಲು. ಅವನು ಯಾವ ಕರ್ಮವನ್ನೂ ಮಾಡಿಲ್ಲ. ಕಳೆದ ಗಣೇಶನ ಪೂಜೆಗೆ ಇನ್ನೂರು ಒಂದು ರೂಪಾಯಿ ದೇಣಿಗೆ ಕೊಟ್ಟಂತಹ ಒಬ್ಬ ಅಲ್ಪಸಂಖ್ಯಾತನನ್ನು ಕೊಂದರೆ ಇದು ಧರ್ಮವೇನು. ಪ್ರತಿವರ್ಷ ನೂರಾರು ಜನ ಹಿಂದೂಗಳನ್ನು ಮನೆಗೆ ಕರೆದು ಅನ್ನ ಹಾಕುವಂತಹ ಅಲ್ಪ ಸಂಖ್ಯಾತನನ್ನು ಬೀದಿಯಲ್ಲಿ ಮಚ್ಚಿನಿಂದ ಕೊಚ್ಚುವುದು ಒಂದು ಧರ್ಮವೇನು ? ಅದು ನ್ಯಾಯವೇನು ? ಆದ್ದರಿಂದ ಈ ಒಂದು ಕೃತ್ಯವನ್ನು ಮಾಡಿದವರಿಗೆ ಏನು ಲಾಭ ಸಿಗುತ್ತದೆಯೋ ನನಗಂತೂ ಗೊತ್ತಿಲ್ಲ. ಆದರೆ ಈ ರಾಷ್ಟ್ರದಲ್ಲಿ ನಡೆದಂತಹ ಸಾವಿರಾರು ಎಂದು ಲೆಕ್ಕ ಕೊಡುತ್ತಾರೆ, ಅದು ಎಷ್ಟು ಸಾವಿರ ಇದೆಯೋ ನನಗೆ ಗೊತ್ತಿಲ್ಲ, ಅಷ್ಟು ಜನರ ಕೊಲೆಗೆ, ಪಾಪಕ್ಕೆ ಈ ಕೃತ್ಯವನ್ನು ಎಸಗಿದಂತವರು ಜವಾಬ್ದಾರರಾಗುತ್ತಾರೆ. ಇದರ ಜೊತೆಗೆ ನನ್ನ ಮಿತ್ರರಲ್ಲಿ ಒಂದು ಪ್ರಾರ್ಥನೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗಿದ್ದಾರೆ. ಮಸ್ಕಾಟ್‌ನಲ್ಲಿ ಕೆಲಸ ಮಾಡುತ್ತಿರುವಂತಹ ರುದ್ರಯ್ಯನವರ ಗಮನಕ್ಕೆ ಬರಬೇಕು, ಅವನ ಹೆಂಡತಿ ಮಕ್ಕಳು ಬೀದಿಯಲ್ಲಿ ತಿರುಗಾಡಬೇಕಾಗುತ್ತದೆ ಎಂದು. ದುಬಾಯ್‌ನಲ್ಲಿ ಕೆಲಸ ಮಾಡುತ್ತಿರುವ ನರಸಿಂಹ ಮೂರ್ತಿ ಅವರ ಮಕ್ಕಳ ಗಮನಕ್ಕೆ ಬರಬೇಕು. ಇಲ್ಲಿ ಅಲ್ಪಸಂಖ್ಯಾತರನ್ನು ಕೊಲ್ಲುವ ರೀತಿಯಲ್ಲಿ ಅವರೆಲ್ಲ ಕೊಂದರೆ ನೀವು ಏನು ಮಾಡುತ್ತೀರಿ ? ಏನು ಪರಿಹಾರ ಕೊಡುತ್ತೀರಿ ? ಈ ಜನತೆಗೆ, ಬೇರೆ ರಾಷ್ಟ್ರದಲ್ಲಿ ಎಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗಿದ್ದಾರೋ, ಆ ಅಲ್ಪಸಂಖ್ಯಾತರಾಗಿರುವಂತಹ ರಾಷ್ಟ್ರದಲ್ಲಿ ನೀವು ಎಸಗಿದಂತಹ ಕೃತ್ಯವನ್ನು ಎಸಗುವುದಾದರೆ, ನೀವು ಏನು ಅವರಿಗೆ ರಕ್ಷಣೆ ಕೊಡುತ್ತೀರಿ, ಏನು ಉತ್ತರಕೊಡುತ್ತೀರಿ ? ಅವರಿಗೆ ನೀವು ಏನು ಸಂತಾಪವನ್ನು ಸೂಚನೆ ಮಾಡುತ್ತೀರಿ ? ಆದ್ದರಿಂದ ಆ ದಿನ ಅಯೋಧ್ಯೆಯಲ್ಲಿ ನಡೆದಂತಹ ಘಟನೆಗೆ ಮನುಕುಲವೇ ತಲೆಬಾಗುವಂತಹುದು. ಅದು ಆ ಪಕ್ಷ ಈ ಪಕ್ಷ ಎಂದಲ್ಲ. ನಾನು ಆಗಲೇ ಹೇಳಿದ್ದೇನೆ. ಪಕ್ಷದ ಪ್ರಶ್ನೆ ಬೇಡವೇ ಬೇಡ. ಈ ರಾಷ್ಟ್ರದಲ್ಲಿ ಯಾವ ಪಕ್ಷ ಇದೆ, ಯಾವ ನೀತಿ ಇದೆ ? ನಮಗೆ. ಕಾಂಗ್ರೆಸ್‌ನಲ್ಲಿದ್ದಂತಹ ಶ್ರೀ ವಿ.ಪಿ. ಸಿಂಗ್ ಅವರನ್ನು ಕರೆದುಕೊಂಡು ಬಂದು ವಿರೋಧ ಪಕ್ಷದವರು ಪ್ರಧಾನಿಯಾಗಿ ಮಾಡಿದರು. ವಿರೋಧ ಪಕ್ಷದಲ್ಲಿದ್ದಂತಹ ಶ್ರೀ ಚಂದ್ರಶೇಖರ್ ಅವರನ್ನು ಕಾಂಗ್ರೆಸ್‌ನವರು ಪ್ರಧಾನಿಯಾಗಿ ಮಾಡಿದರು. ಯಾವ ನೀತಿ, ಇದು ಯಾವ ಪಕ್ಷ ಇಲ್ಲಿದೆ. ಆದ್ದರಿಂದ ನಾನು ಈ ವಿಷಯ ಮಾತನಾಡುತ್ತಿಲ್ಲ. ನನ್ನ ಮಿತ್ರರು ಈಗಾಗಲೇ ಹೇಳಿದರು, ಯಾರು ಇದ್ದಾರೆ ಎಂದು. ಅದಲ್ಲ ನಾನು ಹೇಳುತ್ತಿರುವುದು. ಯಾರು ಈ ಮತಾಂಧತೆ ಎನ್ನುವಂತಹ ಮತ್ತೇರಿದ ಜನ ಇದ್ದಾರೋ, ನಂಬಿಕೆ ಉಳ್ಳ ಜನ ಇದ್ದಾರೋ ಅವರ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ, ಪಕ್ಷದ ಬಗ್ಗೆ ನಾನು ಮಾತನಾಡುತ್ತಿಲ್ಲ. ಆದ್ದರಿಂದ, ಈ ಕೃತ್ಯದಿಂದ ಆದಂತಹ ದುಷ್ಪರಿಣಾಮಗಳಿಗೆ ಧರ್ಮ–ಕರ್ಮ, ಪಾಪ–ಪುಣ್ಯ, ಸ್ವರ್ಗ–ನರಕ, ಇವೆಲ್ಲವೂ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಈ ವಿಶ್ವದ ಎಲ್ಲಾ ಮನುಷ್ಯತ್ವಕ್ಕೆ ಇವರು ಧಕ್ಕೆ ತಂದಿದ್ದಾರೆ. ಮನುಕುಲ ತಲೆಬಾಗುವ ರೀತಿಯಲ್ಲಿ ಇವರು ಈ ಕೃತ್ಯವನ್ನು ಮಾಡಿದ್ದಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ನಾನು ಬೆಳಿಗ್ಗೆ ಮಾತನಾಡುತ್ತಾ ಈ ಜನಕ್ಕೆ ಹಿಂದೂ ಧರ್ಮದ ರಕ್ಷಣೆ ಹಿಂದೂಗಳ ಉದ್ಧಾರ ಮಾಡುವಂತಹ ನಿಜವಾದ ಉದ್ದೇಶ ಇದ್ದರೆ ಮಂಡಲ್ ಕಮೀಷನ್ ರಿಪೋರ್ಟ್‌ಗೆ ಇವರು ಏಕೆ ವಿರೋಧ ಮಾಡಿದರು ಎಂದು ಹೇಳಿದೆ.

ಮಂಡಲ್ ಕಮೀಷನ್ ವರದಿಯಲ್ಲಿ ಮಹಮದೀಯರಿಗೆ ಯಾವ ಸೌಲಭ್ಯ, ಸವಲತ್ತನ್ನು ಒದಗಿಸಿರಲಿಲ್ಲ. ಆದರೂ ಕೂಡ ಮಂಡಲ್ ಕಮೀಷನ್ ಬಂದಂತಹ ಸಂದರ್ಭದಲ್ಲಿ ನಂಬಿಕೆವುಳ್ಳಂಥ ಜನ ಅದನ್ನು ವಿರೋಧ ಮಾಡಿಸಿದರು. ಆದ್ದರಿಂದ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಿಂದೂಗಳ ಮತೀಯ ಭಾವನೆಯನ್ನು ಕೆರಳಿಸಿ ಆ ಮತೀಯ ಭಾವನೆಯ ಪಿತ್ತವನ್ನು ನೆತ್ತಿಗೇರಿಸಿ ವೈಚಾರಿಕತೆಯನ್ನು ಕೊಲ್ಲುವುದು ಒಂದು ಉದ್ದೇಶ, ಓಟನ್ನು ಪಡೆಯುವುದು ಮತ್ತೊಂದು ಉದ್ದೇಶ. ಓಟನ್ನು ಪಡೆಯುವುದರಿಂದ ನನಗೆ ಹೆಚ್ಚು ನೋವು ಇಲ್ಲ. ಈ ರಾಷ್ಟ್ರದ ವೈಚಾರಿಕತೆಯ ಕ್ರಾಂತಿಗೆ ನೀರೆರೆಚುತ್ತಿದ್ದಾರೆ. ಇದು ಎಲ್ಲಾ ಯುಗ ಧರ್ಮಗಳಲ್ಲಿಯೂ ನಡೆದುಕೊಂಡು ಬರುತ್ತಿದೆ. ಇವತ್ತು ಅದು ನಡೆಯುತ್ತಿದೆ. ಆದ್ದರಿಂದ ಹಿಂದೂ ಧರ್ಮದ ಉದ್ಧಾರವನ್ನು ಮಾಡುತ್ತೇವೆ. ಹಿಂದು ರಾಷ್ಟ್ರದ ಪರಿಕಲ್ಪನೆಯನ್ನು ನಾವು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆಂದು ಹೇಳುವುದು ರಾಜಕೀಯ ಉದ್ದೇಶವೇ ಹೊರತು ಧರ್ಮದ ಉದ್ಧಾರದ ಉದ್ದೇಶ ಅಲ್ಲ. ಈ ಅಕೃತ್ಯವನ್ನು, ಅಪಚಾರವನ್ನು ಎಸಗಿದಂಥದನ್ನು ರಾಜ್ಯ ಸರ್ಕಾರ ತಡೆಯುವುದರಲ್ಲಿ ವಿಫಲವಾಗಿದೆ. ದುರಾದೃಷ್ಟವಶಾತ್ ಆ ಅಪರಾಧವನ್ನು ತಡೆಯಲಿಕ್ಕೆ ವಿಫಲವಾದಂಥ ಸರ್ಕಾರಕ್ಕೆ ಶಿಕ್ಷೆ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶ ನನಗೆ ತಿಳಿದ ಮಟ್ಟಿಗೆ ಇಲ್ಲ. ಈ ರಾಷ್ಟ್ರದ ಜನ ಇಷ್ಟಕ್ಕೆ ನಿಲ್ಲಿಸುವುದಿಲ್ಲ. ಮೊನ್ನೆ ನಮ್ಮ ಹಿರಿಯರು ಹೇಳಿದ್ದನ್ನು ನಾನು ಅಭಿನಂದಿಸುತ್ತೇನೆ. ಅವರು ನಮ್ಮೆಲ್ಲರಿಗೂ ಮನಮೆಚ್ಚುವ ರೀತಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಮೊಟ್ಟಮೊದಲು ನಮಗೆ ಈ ರಾಷ್ಟ್ರ, ಆಮೇಲೆ ಪಕ್ಷ, ಆಮೇಲೆ ನಾಡು. ದೇಶ ಇದ್ದರೆ ಚುನಾವಣೆಗಳು ನಡೆಯುತ್ತವೆ, ಒಂದು ಸಾರಿ ನೀವು ಮಂತ್ರಿಗಳಾಗುತ್ತೀರಿ, ಒಂದು ಸಾರಿ ನಾವು ಮಂತ್ರಿಗಳಾಗುತ್ತೇವೆ. ದೇಶ ಇದ್ದರೆ ನೀವು ಲೂಟಿ ಹೊಡೆದುಕೊಳ್ಳಬಹುದು. ನಾವು ಲೂಟಿಯನ್ನು ಹೊಡೆದುಕೊಳ್ಳಬಹುದು. ದೇಶ ಇದ್ದರೆ ನಿಮ್ಮ ಮಗನಿಗೂ ಕೆಲಸ ಕೊಡಿಸಿಕೊಳ್ಳಬಹುದು, ನಮ್ಮ ಮಗನಿಗೂ ಕೆಲಸ ಕೊಡಿಸಿಕೊಳ್ಳಬಹುದು, ದೇಶ ಉಳಿದುಕೊಂಡಿದ್ದರೆ ನೀವು ಫ್ಲಾಗ್ ಅನ್ನು ಹಿಡಿಯಬಹುದು. ನಾವು ಈ ಫ್ಲಾಗ್ ಹಿಡಿಯಬಹುದು. ಆದರೆ ದೇಶವೇ ನಾಶವಾದರೆ ನಿಮ್ಮ ಪಕ್ಷ ಎಲ್ಲಿ ಉಳಿಯುತ್ತದೆ ನೀವು ಎಲ್ಲಿ ಉಳಿಯುತ್ತೀರಿ, ಈ ದೃಷ್ಟಿಯಿಂದ ನಾನು ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಕೃತ್ಯವನ್ನು ತಡೆಯಲಿಕ್ಕೆ ಕೇಂದ್ರ ಸರ್ಕಾರ ಏತಕ್ಕೆ ಪ್ರಯತ್ನ ಮಾಡಿಲ್ಲ. ಮೂಢನಂಬಿಕೆಯ ಮತಾಂಧರಿಂದ ನಡೆದಂತಹ ಕೃತ್ಯವನ್ನು ತಡೆಯುವುದರಲ್ಲಿ ಉತ್ತರ ಪ್ರದೇಶದ ಸರ್ಕಾರ ವಿಫಲವಾಗಿದೆ. ಆ ಸರ್ಕಾರವನ್ನು ನೀವು ವಜಾ ಮಾಡಿದ್ದೀರಿ, ಆಗ ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು? ಈ ಮಾತನ್ನಾಡುವಾಗ ಆಗ ಕೇಂದ್ರ ಸರ್ಕಾರ ಯಾವ ಪಕ್ಷದ್ದು ಇತ್ತು ಎಂದು ಸಂಪೂರ್ಣವಾಗಿ ಮರೆಯಬೇಕೆಂದು ನಾನು ನನ್ನ ಮಿತ್ರರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾರಿದ್ದರೂ ಅಂಥ ವ್ಯಕ್ತಿ ಮುಖ್ಯವಲ್ಲ. ಪಕ್ಷ ಮುಖ್ಯವಲ್ಲ. ಒಂದು ವಾದ. ಏನೆಂದರೆ ಕಾನೂನಿನ ಅಡ್ಡಿ ಇತ್ತು. ಇಂತಹ ಘೋರಕೃತ್ಯ ನಡೆಯುವಂತಹ ಸಂದರ್ಭದಲ್ಲಿ ಮನುಕುಲಕ್ಕೆ ಮಸಿ ಬಳಿಯುವಂತಹ ಕೃತ್ಯ ನಡೆಯುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಅದನ್ನು ತಡೆಯಲು ಕಾನೂನಿನ ಅವಕಾಶ ಇರಲಿಲ್ಲ. ಕಾನೂನಿನ ಅಡ್ಡಿ ಇತ್ತು ಎನ್ನುವಂತಹ ವಾದವನ್ನು ಒಪ್ಪಲಿಕ್ಕೆ ನಾನು ಸಿದ್ಧನಿಲ್ಲ. ಸಂವಿಧಾನದ ವಿಧಿ 355

> "It shall be the duty of the Union to protect every State against the external aggression and internal disturbance and to ensure that the Government of every State is carried on in accordance with the provisions of this Constitution."

ಸಂವಿಧಾನದ ವಿಧಿ 355ಯಲ್ಲಿ ಸ್ಪಷ್ಟವಾಗಿ ನಿರ್ದಿಷ್ಟವಾಗಿ there is a specific provision in the Constitution to prevent the internal disturbances. I would like to know

from the legal experts or anybody, any person who wants to say that there is a legal bar to prevent this offence, to prevent this destruction. ಆದುದರಿಂದ, ಕಾನೂನಿನ ಅಡ್ಡಿ ಇತ್ತು ಎನ್ನುವ ವಾದವನ್ನು ನಾನು ನಂಬುವುದಕ್ಕೆ ಸಾಧ್ಯವಿಲ್ಲ. ಇದನ್ನು ಒಪ್ಪುವುದಕ್ಕೂ ಸಿದ್ಧನಿಲ್ಲ. ಮತ್ತೆ ಏಕೆ ಕೇಂದ್ರ ಸರ್ಕಾರ ಈ ಕೆಲಸ ಮಾಡಲಿಲ್ಲ ? ಏಕೆ ಮೋಸ ಹೋಯಿತು ? It looks childish. ಉತ್ತರ ಪ್ರದೇಶದ ಸರ್ಕಾರ, ಭಾರತೀಯ ಜನತಾ ಪಕ್ಷದ ಮಹಾ ನಾಯಕರುಗಳು ಕೇಂದ್ರ ಸರ್ಕಾರಕ್ಕೆ ನಂಬಿಸಿ ದ್ರೋಹ ಮಾಡಿದರು. "ನಾವು ಕರಸೇವೆಯನ್ನು ಮಾಡುವುದಿಲ್ಲವೆಂದು, we will perform it in the form of Bhajans ಎಂದು ಹೇಳಿ ನಮಗೆ ದ್ರೋಹ ಮಾಡಿದ್ದಾರೆ. They have committed a breachof trust, breach of confidence." ಒಂದು ರಾಷ್ಟ್ರದ 70–80 ಕೋಟಿ ಜನರ ಜೀವ, ಆಸ್ತಿ, ಮಾನ–ಮರ್ಯಾದೆ ಇವುಗಳೆಲ್ಲವನ್ನೂ ಕಾಪಾಡಬೇಕಾಗಿರತಕ್ಕಂಥ ಈ ರಾಷ್ಟ್ರದಲ್ಲಿ ಆಡಳಿತ ನಡೆಸುತ್ತಿರತಕ್ಕಂಥ ಸರ್ಕಾರ ಜವಾಬ್ದಾರಿಯಿಂದ ಈ ಮಾತನ್ನು ಹೇಳಿದರೆ ನಾನು ನಂಬುವುದಿಲ್ಲ. ಅಲ್ಲಿ ಯಾರು ಪ್ರಧಾನಿಯಾಗಿದ್ದರು ಎನ್ನುವುದು ನನಗೆ ಮುಖ್ಯವಲ್ಲ, ಯಾವ ಪಕ್ಷ ಅಧಿಕಾರದಲ್ಲಿದೆ ಎನ್ನುವುದು ಮುಖ್ಯವಲ್ಲ. ಪತ್ರಿಕೆಗಳಲ್ಲಿ ಬಂದಿರುವಂಥ ವರದಿ ಮತ್ತು ನಮಗೆ ನಂಬಲರ್ಹ ಮೂಲಗಳಿಂದ ಬಂದಿರುವಂಥ ವಿಷಯಗಳನ್ನು ಗಮನಿಸಿದರೆ ಕೇಂದ್ರ ಸರ್ಕಾರದವರು ಮೋಸ ಹೋಗಿದ್ದಾರೆಂದು ನಾವು ನಂಬುವುದಕ್ಕೆ ಸಾಧ್ಯವಿಲ್ಲ. ಈ ವಿಷಯದಲ್ಲಿ ಭಾರತೀಯ ಜನತಾ ಪಕ್ಷದವರದು ಏನೋ ತಪ್ಪಿದೆ ಎಂಬುದು ನನ್ನ ಭಾವನೆ. To the extent they are honest that they have said it in their manifesto. ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಅಲ್ಲಿರುವ ಮಸೀದಿಯನ್ನು ಒಡೆದು ರಾಮಮಂದಿರವನ್ನು ಕಟ್ಟುತ್ತೇವೆಂದು ಜನರಿಗೆ ವಾಗ್ದಾನವನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಡಿಸೆಂಬರ್ 2ನೇ ತಾರೀಖು ಅಡ್ವಾಣಿಯವರು 'We will perform this Kar–seva with bricks and shovels.'ಇದನ್ನು ಬಹಿರಂಗವಾಗಿ ಡಿಕ್ಲೇರ್ ಮಾಡಿದ್ದಾರೆ. ಈ ಮಸೀದಿಯ ಕಟ್ಟಡವನ್ನು ಕೆಡುವುದಕ್ಕೆ ಎಂತಹ ತರಬೇತಿ ಬೇಕು, ಎಂತಹ ನೈಪುಣ್ಯತೆ ಬೇಕು, ಎಂತಹ ಆಯುಧಗಳು ಬೇಕು ಎನ್ನುವುದರ ಬಗ್ಗೆಯೂ ಸಾಕಷ್ಟು ತರಬೇತಿ ಗುಜರಾತ್‌ನಲ್ಲಿ ಕೊಟ್ಟಿದ್ದಾರೆ. ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಇವೆಲ್ಲವನ್ನೂ ಮಾಡುತ್ತೇವೆಂದು ಹೇಳಿದ್ದಾರೆ. ಪಕ್ಷದ ಕಾರ್ಯಕರ್ತರುಗಳಿಗೆಲ್ಲಾ ತರಬೇತಿ ಕೊಡಿಸಿದ್ದಾರೆ. ಅದೇ ರೀತಿ ಅವರ ಪಕ್ಷದ ಎಲ್ಲಾ ನಾಯಕರುಗಳೂ ಸಹ ನಾವು ಇದನ್ನು ಮಾಡಿಯೇ ಮಾಡುತ್ತೇವೆಂದು ಡಿಕ್ಲೇರ್ ಮಾಡಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ಇದನ್ನು ಗಮನದಲ್ಲಿಟ್ಟುಕೊಂಡು ಆ ಒಂದು ಕಟ್ಟಡವನ್ನು ಸಂರಕ್ಷಣೆ ಮಾಡುವಂಥ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಮಾಡಲಿಲ್ಲವೆಂದರೆ ನಾವು ಮೋಸ ಹೋಗಿದ್ದೇವೆಂದರೆ ನಂಬುವುದಕ್ಕೆ ಸಿದ್ಧವಿಲ್ಲ. It is not that the BJP has done it clandestinely. It is not that the BJP has concealed it. ಇದ್ದಕ್ಕಿದ್ದಂತೆ ಪಕ್ಕದಲ್ಲಿ ಕುಳಿತುಕೊಂಡು ನನ್ನನ್ನು ಒಡೆದು ನಾಶ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಇಷ್ಟೆಲ್ಲವನ್ನೂ ಹೇಳಿದರೂ ಕೂಡ ಅವರು ನಂಬಿಕೊಂಡಿದ್ದಾರೆ. ನಂಬಿಕೊಳ್ಳುವುದು ತಪ್ಪು ಎಂದೇನೂ ನಾನು ಹೇಳುವುದಿಲ್ಲ. ಆದರೆ, ಆ ರೀತಿ ನಂಬಿಕೊಂಡಂಥ ಸರ್ಕಾರ ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಲಿಲ್ಲವೆಂದರೆ ಅದಕ್ಕೆ ಸಂಪೂರ್ಣವಾದ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ನಮಗೆ ಬಂದಿರುವಂಥ ವರ್ತಮಾನದ ಪ್ರಕಾರ ಕೇಂದ್ರ ಸರ್ಕಾರದ ಕೆಲವು ಮಂತ್ರಿಗಳಿಗೆ ಇದು ಸುಳ್ಳೇ, ನಿಜವೇ ? ಸತ್ಯವೇ ? ಅಸತ್ಯವೇ ? ಎಂಬುದು ಅವರಿಗೂ ಗೊತ್ತು. ರಾಷ್ಟ್ರದ ವಿಜಿಲೆನ್ಸ್ ಬ್ಯೂರೋದವರು ಪ್ರಧಾನಿಯವರಿಗೆ 'ಉತ್ತರ ಪ್ರದೇಶದ ಸರ್ಕಾರವನ್ನು ನೀವು ಬರಕಾಸ್ತು ಮಾಡಬೇಕು, ಡಿಸ್‌ಮಿಸ್ ಮಾಡಬೇಕು. ಡಿಸ್‌ಮಿಸ್ ಮಾಡಿ ಸಂವಿಧಾನದ 355 ಅಥವಾ 356ನೇ ವಿಧಿಯಡಿ ಈ ವಿಚಾರವನ್ನು ಕೈಗೆತ್ತಿಕೊಂಡು ರಕ್ಷಣೆ ಮಾಡುವಂಥ ಪ್ರಯತ್ನ ಮಾಡಬೇಕು. ಎಂದು ಬುದ್ಧಿವಾದ ಹೇಳಿದ್ದಾರೆ. ಇಷ್ಟೆಲ್ಲಾ ಆಗಿ,

ಇಷ್ಟೆಲ್ಲಾ ಗೊತ್ತಿದ್ದರೂ ಕೂಡ ಕೇಂದ್ರ ಸರ್ಕಾರ ಏಕೆ ಈ ದಿಸೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ ? ಯಾವುದೇ ರಾಗ–ದ್ವೇಷ ಇಲ್ಲದೆ, ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕೆಂದರೆ ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಏನೆಂದರೆ, ಕೇಂದ್ರ ಸರ್ಕಾರಕ್ಕೆ ಆ ಅಕೃತ್ಯವನ್ನು ತಡೆಯುವಂಥ ಪ್ರಾಮಾಣಿಕ ಬಯಕೆ ಇರಲಿಲ್ಲ. ಅಷ್ಟೇ ಅಲ್ಲ, ನಡೆದಂಥ ಘಟನಾವಳಿಗಳು, ಹಿಂದಿನ ಸಂದರ್ಭಗಳು, ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡರೆ ಮತ್ತು ನಿನ್ನೆ ನಮ್ಮ ಈ ಸದನದಲ್ಲಿ ಭಾರತೀಯ ಜನತಾ ಪಕ್ಷದ ಮಿತ್ರರ ಭಾಷಣಗಳನ್ನು ಕೇಳಿದ ಮೇಲೆ ಇವರು ಬಿ.ಜೆ.ಪಿ.ಯ ಜೊತೆ ಶಾಮೀಲಾಗಿದ್ದಾರೆ ಎಂದು ನನಗನ್ನಿಸುತ್ತದೆ ಈ ದೇಶದಲ್ಲಿ ಒಂದು ನಂಬಿಕೆ ಇದೆ, ಅದು ಸರಿಯೋ ಅಥವಾ ತಪ್ಪೋ ನನಗೆ ಗೊತ್ತಿಲ್ಲ. ಒಂದು ನಂಬಿಕೆ ಏನೆಂದರೆ ಬಹಳ ಜನರು ಅನೇಕ ಸಂದರ್ಭಗಳಲ್ಲಿ ಅಲ್ಪಸಂಖ್ಯಾತರ ಮತಗಳನ್ನು ಗಳಿಸುವುದಕ್ಕಾಗಿ ಕಾಂಗ್ರೆಸ್ ಪಕ್ಷವೇ ಆರ್ಎಸ್ಎಸ್ ಎನ್ನತಕ್ಕಂಥ ಒಂದು ಭೂತವನ್ನು ಸೃಷ್ಟಿಸಿದ್ದಾರೆ.

3.45. ಪಿ.ಎಂ

They are putting the fear complex in the minds of the minority. ಭಾರತೀಯ ಜನತಾಪಕ್ಷದ ನಾಯಕರುಗಳು ಕಾಶ್ಮೀರಕ್ಕೆ ಬಾವುಟವನ್ನು ಹಾರಿಸಲು ಹೋದರೆ, ಅವರಿಗೆ ಕೇಂದ್ರ ಸರ್ಕಾರ ಸರ್ಕಾರದ ಖರ್ಚಿನಲ್ಲಿ ವಿಮಾನದಲ್ಲಿ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಬಾವುಟವನ್ನು ಹಾರಿಸಿ ಮತ್ತೆ ವಾಪಸ್ ಕರೆದುಕೊಂಡು ಬಿಡುತ್ತದೆ. ಏಕೆ ? Why? Can they extend the same facility to all? What does it mean? ಗಲಭೆಯಾದಂಥ ಸಂದರ್ಭದಲ್ಲಿ ಕರ್ನಾಟಕದಲ್ಲಿ 78 ಜನರು ಪ್ರಾಣವನ್ನು ನೀಗಿದ್ದಾರೆ. ಆದರೆ, ಚರಿತ್ರೆಯನ್ನು ಕೆಡಿಸಬೇಕಾದಂಥ ಅಕೃತ್ಯವು ನಡೆಯತಕ್ಕಂಥ ಸಂದರ್ಭದಲ್ಲಿ, ಮನುಜ ಕುಲಕ್ಕೆ ಮಸಿಯನ್ನು ಬಳಿಯತಕ್ಕಂಥ ಸಂದರ್ಭದಲ್ಲಿ, ಆ ಒಂದು ಅಪರಾಧ ನಡೆಯತಕ್ಕಂಥ ಸಂದರ್ಭದಲ್ಲಿ ಗಾಳಿಯಲ್ಲಿ ಒಂದು ಗುಂಡೂ ಸಹ ಹಾರಿಸಲಿಲ್ಲ. ಅಲ್ಲಿ ಜನಕ್ಕೆ ಗುಂಡನ್ನು ಹಾರಿಸುವುದು ಬೇಡ, ಕರಸೇವಕರನ್ನು ಕೊಲ್ಲುವ ಅವಶ್ಯಕತೆ ಇರಲಿಲ್ಲ, ಮತೀಯ ಭಾವನೆಯು ಮತ್ತೇರಿದ ಆ ಜನಸಂದಣಿಯ ಮೇಲೆ ಗುಂಡನ್ನು ಹಾರಿಸತಕ್ಕ ಅವಶ್ಯಕತೆ ಇರಲಿಲ್ಲ, ಆದರೆ ಗಾಳಿಯಲ್ಲಿ ಒಂದೇ ಒಂದು ಗುಂಡನ್ನು ಹಾರಿಸಲಿಲ್ಲ. What does it mean? ಅದು ಅಲ್ಲಿಗೇ ನಿಲ್ಲಲಿಲ್ಲ. ಅಲ್ಲಿ 2 ಸಾವಿರ ಜನ ಸೈನಿಕರಿದ್ದರಂತೆ. ಕರಸೇವಕರು ಅವರನ್ನೆಲ್ಲಾ ತಳ್ಳಿಕೊಂಡು, ನೂಕಿಕೊಂಡು ಹೋದರಂತೆ; ಇದನ್ನು ನಂಬಬಹುದೆ ? Can we believe this? ಈ ಎರಡು ಸಾವಿರ ಜನ ಸೈನಿಕರು ಬರದಂತೆ ಕರಸೇವಕರು ರಸ್ತೆಯಲ್ಲಿಯೇ ಅಡ್ಡ ಹಾಕಿದರಂತೆ. ಅವರೇನು ಹೋಮ್ ಗಾರ್ಡ್ಸ್ಗಳೆ, ಎನ್.ಸಿ.ಸಿ.ಯವರೆ, ಎರಡು ಸಾವಿರ ಜನ ಸೈನಿಕರನ್ನು ಆ ಸ್ಥಳಕ್ಕೆ ಬರದಂತೆ ಕರಸೇವಕರು ತಡೆಯೊಡ್ಡಿದರೆಂದರೆ ಅದನ್ನು ನಂಬುವುದಕ್ಕೆ ಸಾಧ್ಯವೆ ? ಆ ಘಟನೆಯನ್ನು ತಡೆಯತಕ್ಕವರಿಗೆ ಪ್ರಾಮಾಣಿಕವಾದ ಆಸೆ ಇದ್ದರೆ, ಹಂಬಲ ಇದ್ದರೆ ಕೊನೆಯ ಪಕ್ಷ ಗಾಳಿಯಲ್ಲಿ ಒಂದು ಗುಂಡನ್ನು ಹಾರಿಸಬಹುದಾಗಿತ್ತು. ಅಷ್ಟೇ ಅಲ್ಲ, ಇಲ್ಲಿ ಏನು ಪಿತೂರಿ ಇದೆಯೋ ಅಥವಾ ಯಾವ ಒಂದು ಸಂಚು ಇದೆಯೋ ನನಗೆ ಗೊತ್ತಿಲ್ಲ ಆದರೆ, ಅಲ್ಲಿ ಕರಸೇವಕರು ಮಸೀದಿಯನ್ನು ನಾಶ ಮಾಡುತ್ತಿದ್ದರೆ ಇಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ತಮ್ಮ ಕಾಲಿನ ಶೂಅನ್ನು ಬಿಟ್ಟು ಆ ಪ್ರತಿಮೆಗೆ ನಮಸ್ಕಾರ ಮಾಡುತ್ತಿದ್ದಂಥ ಚಿತ್ರವನ್ನು ವೃತ್ತಪತ್ರಿಕೆಗಳಲ್ಲಿ ನೋಡಿದ್ದೇವೆ. When such a heinous crime is being committed, the Police Officer was saluting the stone God? Can I believe that this Government has got the honest approach to stop this destruction? ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಈ ಎಲ್ಲಾ ನಡವಳಿಕೆಗಳನ್ನು ನೋಡಿದಾಗ, Intelligence Bureau ದವರು ಏನು ಹೇಳಿದ್ದಾರೆ. ಇದೆಲ್ಲದಕ್ಕಿಂತ ಪ್ರಮುಖವಾದುದೆಂದರೆ ಭಾರತೀಯ ಜನತಾ ಪಕ್ಷದ ವತಿಯಿಂದ ರಚನೆಯಾಗಿರತಕ್ಕ ಉತ್ತರ

ಪ್ರದೇಶದ ಸರ್ಕಾರವು ಇಂಥ ಅಕೃತ್ಯಗಳು ನಡೆದಾಗ ಅದನ್ನು ತಡೆಯಲು ಪ್ರಯತ್ನ ಮಾಡಿತ್ತೇ ಅಥವಾ ಇಲ್ಲವೇ ಎನ್ನತಕ್ಕ ಅನುಮಾನ ಇದ್ದೇ ಇದೆ. There was a suspicion as to whether the State Government intend to stop this destruction. ಕರ್ನಾಟಕ ಸರ್ಕಾರವನ್ನು ನಂಬಿಕೊಳ್ಳಬಹುದಿತ್ತು. ಏಕೆಂದರೆ ಅದೇ ಪಕ್ಷದ ಸರ್ಕಾರವಾದ್ದರಿಂದ ಇದು ನಂಬಿಕೆಯುಳ್ಳ ಸರ್ಕಾರ. ಅವರೇ ಮಾಡಿದಂಥ ಸರ್ಕಾರ, ಅವರು ನಂಬಲ್ಪಡಬಹುದಾದಂಥ ಸರ್ಕಾರ, ಮುಖ್ಯಮಂತ್ರಿಗಳು ಹೇಳಿದಂತೆ ಕೇಳುತ್ತಾರೆಂದು ನಂಬಿಕೊಳ್ಳಬಹುದಿತ್ತು. ಆದರೆ ಉತ್ತರ ಪ್ರದೇಶದ ಸರ್ಕಾರ ನಂಬಿಕೆದ್ರೋಹ ಮಾಡುವುದಿಲ್ಲ ಎನ್ನತಕ್ಕ ನಂಬಿಕೆಯನ್ನು ಇಟ್ಟುಕೊಂಡಿದ್ದುದು ಬಹಳ ದೊಡ್ಡ ಘೋರ ಅಪರಾಧ. ಇಂಥ ಕೃತ್ಯವನ್ನು ತಡೆಯುವುದಿಲ್ಲ, ತಡೆಯತಕ್ಕ ಪ್ರಯತ್ನವನ್ನು ಮಾಡುವುದಿಲ್ಲ ಎನ್ನತಕ್ಕ ಅನುಮಾನ ಕೇಂದ್ರ ಸರಕಾರಕ್ಕೆ ಇದ್ದೇ ಇತ್ತು. ಇಷ್ಟಾದರೂ ಸಂವಿಧಾನದ 355 ನೇ ನಿಯಮದ ಆಧಾರದ ಮೇಲೆ ಕೇಂದ್ರಸರ್ಕಾರ ಇದನ್ನು ತಡೆಯುವುದಕ್ಕೆ ಸಾಧ್ಯವಿತ್ತು. ಇಷ್ಟು ಹೊತ್ತು ನನ್ನ ಕಂಠ ಶೋಷಣೆ ಮಾಡಿಕೊಂಡ ಉದ್ದೇಶ ಇಷ್ಟೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಪಚಾರವನ್ನು ತಡೆಯುವುದರಲ್ಲಿ ರಾಜ್ಯ ಸರ್ಕಾರ ಎಷ್ಟು ಮಟ್ಟಿಗೆ ಕಾರಣವೋ ಅಷ್ಟೇ ವಿಫಲತೆಯನ್ನು ಕೇಂದ್ರ ಸರ್ಕಾರವೂ ಮಾಡಿದೆ. ಅಷ್ಟೇ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ಇವತ್ತು ಹೊರಬೇಕಾಗುತ್ತದೆ. ಬಿ.ಜೆ.ಪಿ.ಯವರು ಹೇಳುತ್ತಾರೆ, ನಮ್ಮನ್ನು ಏತಕ್ಕೆ ಬ್ಲೇಂ ಮಾಡುತ್ತೀರಿ ? 1986ರಲ್ಲಿ ಮುಚ್ಚಿದ್ದ ಬಾಗಿಲನ್ನು ತೆರೆಸಿ ಪೂಜೆಗೆ ಅವಕಾಶವನ್ನು ಮಾಡಿಕೊಟ್ಟವರು ಯಾರು ? ಅವತ್ತು ಬಿ.ಜೆ.ಪಿ. ಸರ್ಕಾರ ಕೇಂದ್ರದಲ್ಲಿ ಇತ್ತೆ ? 11–11–89 ರಲ್ಲಿ ಶಿಲಾನ್ಯಾಸ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಸರ್ಕಾರ (ಬಿ.ಜೆ.ಪಿ) ಉತ್ತರಪ್ರದೇಶದಲ್ಲಿತ್ತೆ ? ಬಿ.ಜೆ.ಪಿ.ಯವರು ಕೇಂದ್ರ ಸರ್ಕಾರದಲ್ಲಿದ್ದರೆ, ಉತ್ತರಪ್ರದೇಶದಲ್ಲಿದ್ದರೆ ಎಂದರೆ ಅವತ್ತು ಇವರು ಇರಲಿಲ್ಲ. ಕಾಶ್ಮೀರದಲ್ಲಿ ಬಾವುಟ ಹಾರಿಸಲು ಬಿ.ಜೆ.ಪಿ. ಯವರನ್ನು ಕರೆದುಕೊಂಡು ಹೋಗಿದ್ದಾರೆ. ಮುಚ್ಚಿದ್ದ ರಾಮನ ದೇವಸ್ಥಾನದ ಬಾಗಿಲನ್ನು ತೆರೆದು ಪೂಜೆಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಶಿಲಾನ್ಯಾಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇಷ್ಟೆಲ್ಲಾ ಮಾಡಿ ಇಡೀ ರಾಷ್ಟ್ರದ ಜನರು ದುಃಖಿದಲ್ಲಿ ಮುಳುಗಿರುವಾಗ ನೀವು ಶ್ರೀರಾಮನ ಪೂಜೆಯನ್ನು ಮಾಡಿಕೊಳ್ಳಿ ಎಂದು ಮೊನ್ನೆ ತಾನೆ ಅವಕಾಶವನ್ನು ಮಾಡಿ ಕೊಟ್ಟಿದ್ದಾರೆ. ಆದರೆ ಪ್ರಧಾನಿಯವರು ಇದು ನನಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಇದು ಅಲ್ಲಿಯ ಜಿಲ್ಲಾ ಆಡಳಿತಕ್ಕೆ ಸಂಬಂಧಪಟ್ಟಿದ್ದೆಂದು ಹೇಳುತ್ತಾರೆ. ಹಾಗಾದರೆ ಇದರ ಅರ್ಥ ಏನು ? ನಾನು ಯಾರನ್ನೂ ನೋಯಿಸುವ ಆಸೆ ಇಲ್ಲದೆ, ಯಾರನ್ನೂ ವ್ಯಂಗ್ಯ ಮಾಡತಕ್ಕ ಅಭಿಪ್ರಾಯವಿಲ್ಲದೆ ಮತ್ತೊಮ್ಮೆ ನಾನು ಒತ್ತಾಯಮಾಡಿ ಹೇಳುತ್ತೇನೆ, ಡಿಸೆಂಬರ್ 6ನೇ ತಾರೀಖು ನಡೆದಂಥ ಹೀನ ಕೃತ್ಯ ಏನಿದೆ ಅದನ್ನು ತಡೆಯುವುದರಲ್ಲಿ ಕೇವಲ ರಾಜ್ಯ ಸರ್ಕಾರ ಮಾತ್ರವಲ್ಲ ಕೇಂದ್ರ ಸರ್ಕಾರ ಕೂಡ ವಿಫಲವಾಗಿದೆ. ಈ ವಿಫಲತೆಯಿಂದ ಇಡೀ ವಿಶ್ವದ ನಾಗರೀಕ ಸಮಾಜವೇ ತಲೆತಗ್ಗಿಸುವಂತಾಗಿದೆ. ಧರ್ಮಕ್ಕೆ ಮಾಡಿದಂಥ ಅಪಚಾರ, ಸಂವಿಧಾನಕ್ಕೆ, ಕಾನೂನಿಗೆ, ಎಲ್ಲಕ್ಕಿಂತ ಹೆಚ್ಚಾಗಿ ಈ ಮನುಕುಲಕ್ಕೇ ಮಾಡಿದಂಥ ಈ ಅಪಚಾರ ರಾಷ್ಟ್ರದಲ್ಲಿ ವಿಚಾರ ಕ್ರಾಂತಿಯ ಕಿಡಿಗೆ ನೀರನ್ನು ಎರಚಿದೆ. ಈ ಜವಾಬ್ದಾರಿಯನ್ನು ಹೊತ್ತ ಕೇಂದ್ರ ಸರ್ಕಾರ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಅದು ಬೇರೆಯವರಿಗೆ ಶಿಕ್ಷೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಈ ಪ್ರಾಯಶ್ಚಿತ್ತವನ್ನು ಉತ್ತರ ಪ್ರದೇಶದ ಸರ್ಕಾರಕ್ಕಾಗಲಿ, ಕೇಂದ್ರಸರ್ಕಾರಕ್ಕಾಗಲೀ ಯಾವುದೇ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆ ಕೊಡುವುದಕ್ಕೆ ಬರುವುದಿಲ್ಲ. ಆದುದರಿಂದ ಈ ರಾಷ್ಟ್ರದ ಜನತೆಯಲ್ಲಿ ನನ್ನ ಪ್ರಾರ್ಥನೆಯಾದರೂ ಇಷ್ಟೆ. ಮತೀಯ ಭಾವನೆಗಳನ್ನು ಕೆರಳಿಸುವಂಥ ಅಥವಾ ಕೆರಳಿಸುವುದಕ್ಕೆ ಅವಕಾಶವನ್ನು ಮಾಡಿಕೊಡುವಂಥ ಕುಮ್ಮಕ್ಕು ಕೊಡುವಂಥ ಸಂಚಿನಲ್ಲಿ ಮಾಡುವಂಥ ಅಥವಾ ಇದರ ಜೊತೆಗೆ ಶಾಮೀಲಾಗುವಂಥ ಯಾವುದೇ ಶಕ್ತಿ, ಯಾವುದೇ ಸಂಸ್ಥೆ, ಯಾವುದೇ ಸರ್ಕಾರವನ್ನು ಕಾನೂನು ಚೌಕಟ್ಟಿನಲ್ಲಿ ನೇಣು ಹಾಕುವಂಥ ಯೋಜನೆಗಳು

ಪ್ರಯೋಜನವಿಲ್ಲ. ಅಂಥ ಪಕ್ಷಗಳನ್ನು, ಅಂಥ ಶಕ್ತಿಗಳನ್ನು, ಅಂಥ ವ್ಯಕ್ತಿಗಳನ್ನು ಇಂಥ ನಂಬಿಕೆ ಉಳ್ಳವರನ್ನು ಬ್ಯಾಲೆಟ್ಸ್ ಮುಖಾಂತರ ಕೊಲ್ಲಬೇಕು. ಅಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಯಾರೋ ಒಬ್ಬರು ರಾಜೀನಾಮೆ ಕೊಟ್ಟರೆ, ಅಥವಾ ಮಾನ್ಯ ಅದ್ಯಾನಿಯವರು ರಾಜೀನಾಮೆ ಕೊಟ್ಟರೆ, ಕಲ್ಯಾಣ್ ಸಿಂಗರು ರಾಜೀನಾಮೆ ಕೊಟ್ಟರೆ ಅದರಿಂದ ಏನೂ ಪ್ರಯಾಜನವಾಗುವುದಿಲ್ಲ. ಯಾರು ಇಂಥ ಅವಿವೇಕದ ನಡವಳಿಕೆಗಳನ್ನು ನಡೆಸುತ್ತಾರೆ, ಅಪಚಾರಗಳನ್ನು ನಡೆಸುತ್ತಾರೆ ಅಂಥವರನ್ನು ಚುನಾವಣೆಗಳಲ್ಲಿ ಸೋಲಿಸುವುದರ ಮುಖಾಂತರ ಅವರಿಗೆ ಬುದ್ಧಿ ಕಲಿಸಬೇಕು. ಎಲ್ಲಕ್ಕಿಂತ ಮಿಗಿಲಾಗಿ ಸರ್ಕಾರಿ ಪಕ್ಷಗಳ ಜೊತೆಗೆ ನಮ್ಮ ಜನರ ಜವಾಬ್ದಾರಿ ಕೂಡ ಇದೆ. ಯಾವ ಉದ್ದೇಶಕ್ಕಾಗಿ ಹಿಂದೂ ರಾಷ್ಟ್ರದ ಪರಿಕಲ್ಪನೆಯುಳ್ಳ ಜನರು ಈ ಅಕೃತ್ಯವನ್ನು ನಡೆಸಿದರೋ ಆ ಉದ್ದೇಶವನ್ನು ವಿಫಲಗೊಳಿಸಬೇಕು. They should be killed by bullets. Their purpose should be killed, their object should be killed by what not by bullets but by ballots.... ಅದನ್ನು ಮಾಡದಿದ್ದರೆ ಈ ರಾಷ್ಟ್ರದಲ್ಲಿ ಮತೀಯ ಗಲಭೆಗಳನ್ನು ನಿಲ್ಲಿಸುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಮತೀಯ ಭಾವನೆಗಳನ್ನು ಕೆರಳಿಸುವುದನ್ನು ತಡೆಯಲಿಕ್ಕೆ ಸಾಧ್ಯವಾಗುವುದು. The only way is to defeat their object by defeating them in the elections. ನನ್ನ ಸ್ನೇಹಿತರು ನಿನ್ನೆ ಹೇಳುತ್ತಿದ್ದರು. 10 ವರ್ಷಗಳ ಹಿಂದೆ ಇಬ್ಬರು ಕುಳಿತುಕೊಂಡಿದ್ದರು. ಅಲ್ಲಿ ಹೊರುವುದಕ್ಕೆ 4 ಜನ ಇಲ್ಲವೆಂದು ಹೇಳುತ್ತಿದ್ದರು ಅವತ್ತು ಹಾಸ್ಯ ಮಾಡುತ್ತಿದ್ದರು. ಇವತ್ತು ನಾವು 107 ಜನ ಇದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ನಾನು ಹೇಳುತ್ತಿದ್ದೇನೆ. 87 ರಲ್ಲಿ 18 ಜನ ಗೆದ್ದು ಬಂದಿದ್ದರು So it is a logic. They use to demand flush everyday.....ಈ 18 ಜನ ಗೆದ್ದು ಬಂದಿದ್ದು ಹೆಗಡೆಯವರು ಸರಕಾರ ರಚಿಸಿದಾಗ ಹೀಗೆ ಮಾಡಬೇಕು ಇದೇ ಮಾಡಬೇಕೆಂದು ಹೇಳುತ್ತಿದ್ದರು. ಅದೇ ಇವತ್ತು ಎಷ್ಟು ಜನ ಗೆದ್ದು ಬಂದಿದ್ದಾರೆ ? ಚುನಾವಣೆಗಳನ್ನು ಗೆಲ್ಲುವುದಕ್ಕೆ ತಂತ್ರಗಾರಿಕೆ ಅಷ್ಟೇ, ಚುನಾವಣೆಗಳನ್ನು ಗೆಲ್ಲುವುದಕ್ಕೆ ಮನುಕುಲಕ್ಕೆ ಬೆಂಕಿ ಹಚ್ಚುವುದಷ್ಟೇ ಇದರ ಉದ್ದೇಶವೆಂದು ಯಾರಿಗಾದರೂ ಇದ್ದರೆ ಅದು ತಪ್ಪು ಎಂದು ನನ್ನ ಸ್ನೇಹಿತರಿಗೆ ಈ ಸದನದ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇದೆಲ್ಲಾ ಆದ ಮೇಲೆ ಈ ಸಮಸ್ಯೆಗೆ ಪರಿಹಾರವಾಗಿ ಈಗಾಗಲೇ ನಮ್ಮ ಪ್ರಧಾನಮಂತ್ರಿಯವರು ಅಲ್ಲಿ ಮಸೀದಿಯನ್ನು ಕಟ್ಟಿಸುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಈ ರಾಷ್ಟ್ರದಲ್ಲಿ ಎಷ್ಟು ಮಸೀದಿಗಳು ನಷ್ಟವಾಗಿದೆ. ಅಷ್ಟೂ ಮಸೀದಿಗಳನ್ನು ನನ್ನ ಅಭಿಪ್ರಾಯದಲ್ಲಿ ಕಟ್ಟಬೇಕಾಗುತ್ತದೆ. ಇದರ ಬದಲು ಸಮಾಜದಲ್ಲಿರತಕ್ಕ ಜನರಿಗೆ ಅನ್ನ ಬಟ್ಟೆ ಇಲ್ಲದಿರುವಾಗ ಈ ದೇಶದ ಕೆರೆಯಲ್ಲಿರುವ ನೀರನ್ನು ಕಾಲುವೆ ಮಾಡಿಕೊಂಡು ಜಮೀನಿಗೆ ಬಿಟ್ಟುಕೊಳ್ಳಲಿಕ್ಕೂ ಹಣವಿಲ್ಲವೆಂದು ಹೇಳುವಂತಹ ಈ ಸಂದರ್ಭದಲ್ಲಿ ಮಂದಿರ ಮಸೀದಿಗಳನ್ನು ಕಟ್ಟಿಸಲಿಕ್ಕೆ ಹಣ ವೆಚ್ಚ ಮಾಡಬೇಡಿ. ಇದು ನನ್ನ ಅಭಿಪ್ರಾಯ ಅಷ್ಟೇ. You destroy the whole thing.. ಅವರೂ ಇವರು ಏಕೆ ಮಾಡಬೇಕು. ಅದನ್ನು ಸಂಪೂರ್ಣವಾಗಿ ಹೊಡೆದು ಹಾಕಿ ವನ ಮಾಡಿ ಇಲ್ಲವೇ ಕಾಡು ಮಾಡಿ, ಗಿಡ ಮರಗಳಿಂದ ಒಳ್ಳೆ ಗಾಳಿ ಬಂದು ಜನರು ಉಸಿರಾಡುತ್ತಾರೆ. ಅದರ ಬದಲು ಕಲ್ಲಿನಿಂದ ಕಟ್ಟಿದಂತಹ ದೇವಸ್ಥಾನದಿಂದ ಯಾರಿಗೂ ಏನೂ ಪುರುಷಾರ್ಥ ಸಾಧ್ಯವಾಗುವುದಿಲ್ಲ. Whether it is masjid or temple. ಈ ಸದನದ ಮುಖಾಂತರ ತಮ್ಮ ಮುಖಾಂತರ ಕೇಂದ್ರ ಸರಕಾರಕ್ಕೆ ವಿನಂತಿ ಮಾಡುತ್ತೇನೆ ಒಂದು ಗಂಡು ನಿರ್ಧಾರವನ್ನು ಅವರು ತೆಗೆದುಕೊಳ್ಳಲಿ ಎಂದು. ಮಸೀದಿ ಮಂದಿರ ಎರಡನ್ನೂ ನೆಲ ಸಮ ಮಾಡಿ ವನ ಮಾಡಿ ಅದಕ್ಕೆ ಬೇಕಾದರೆ ಒಂದು ಭಾಗಕ್ಕೆ ಮಸೀದಿ ಎಂದೂ ಮತ್ತೊಂದು ಭಾಗಕ್ಕೆ ದೇವಾಲಯವೆಂದು ಇಡಿ. ಇದನ್ನು ಮಾಡುವುದರಿಂದ ಈ ಸಮಸ್ಯೆಗೆ ಪರಿಹಾರ ಸಾಧ್ಯವೇ ಹೊರತು ಅಲ್ಲಿ ಮತ್ತೊಂದು ಮಸೀದಿಯನ್ನು ಕಟ್ಟುವುದು ಇದಕ್ಕೆ ಪರಿಹಾರ ಮಾರ್ಗ ಅಲ್ಲ. ಈ ರಾಷ್ಟ್ರದ ಮುಸಲ್ಮಾನ

ಅಲ್ಪಸಂಖ್ಯಾತರಿಗೆ ಬೇಕಾಗಿರುವುದು ಈ ಜೀವ ಇಲ್ಲದ ಕಟ್ಟಡ ಅಲ್ಲ ಅವರಿಗೆ ಬೇಕಿರುವುದು ನೆಮ್ಮದಿಯ ಬದುಕು. Their life and property should be secured first. ಈ ರಾಷ್ಟ್ರದಲ್ಲಿ ಅವರ ಮಕ್ಕಳು ನೆಮ್ಮದಿಯಿಂದ ಬದುಕಬೇಕು, ಮರ್ಯಾದೆಯಿಂದ ಬದುಕಬೇಕು. They want that nothing more .....ಆದ್ದರಿಂದ ಅಲ್ಪ ಸಂಖ್ಯಾತರಿಗೆ ಮಸೀದಿಯನ್ನು ಕಟ್ಟಿಸಿ ನಮಾಜು ಮಾಡಿಸಿ ಗೆಲ್ಲುವುದಾದರೆ ಹಾಕಿಸಿ. ಆದರೆ ಈ ರಾಷ್ಟ್ರದಲ್ಲಿ ಆಡಳಿತ ಮಾಡುವವರಿಗೆ ನಾನು ಪ್ರಾರ್ಥನೆ ಮಾಡುತ್ತೇನೆ ಈ ರಾಷ್ಟ್ರದಲ್ಲಿ ಬದುಕಿರುವ ಅಲ್ಪಸಂಖ್ಯಾತರಿಗೆ ನೆಮ್ಮದಿಯಿಂದ ಬದುಕಲಿಕ್ಕೆ ವ್ಯವಸ್ಥೆ ಮಾಡಿ ಕೊಡಿ ಎಂದು. ನಿನ್ನೆ ಮಾತನಾಡುವಾಗ ಒಂದು ಲಘುವಾದ ಸಂಭಾಷಣೆ ನನ್ನ ಗಮನಕ್ಕೆ ಬಂತು. ಬಿ.ಜೆ.ಪಿ. ನಾಯಕರನ್ನು ಮಾನ್ಯ ಮುಖ್ಯಮಂತ್ರಿಗಳು ನಂಬಿಕೊಳ್ಳಬೇಕು. ನಿಮ್ಮ ಬಗ್ಗೆ ಅಪಾರವಾದ ನಂಬಿಕೆ ವಿಶ್ವಾಸವಿದೆ ಎಂದು ಪ್ರಸ್ತಾಪವಾಯಿತು. ಪಕ್ಷವೆಂದು ಅಲ್ಲ ಇಂತಹ ಮತಾಂಧ ನಂಬಿಕೆ ಉಳ್ಳಂತಹ ಜನರನ್ನು ನೀವೇನಾದರೂ ನಂಬಿದರೆ ನರಸಿಂಹರಾಯರು ಹೇಗೆ ನಂಬಿ ಕೆಟ್ಟರೋ ನೀವೂ ಹಾಗೇ ನಂಬಿ ಕೆಡುತ್ತೀರಿ. ಅದು 26ನೇಯ ತಾರೀಖು ಹುಬ್ಬಳ್ಳಿಯಲ್ಲಿ ಬಾವುಟ ಹಾರಿಸುವುದು ಇರಬಹುದು, 29ನೆಯ ತಾರೀಖು ಇನ್ನೊಂದು ಕಡೆ ಕವಾಯತಿ ಮಾಡುವುದು ಇರಬಹುದು. ಅದೇನೇ ಇರಲಿ ಅವರು ಹೇಗೆ ನಂಬಿ ಕೆಟ್ಟರು ಹಾಗೆ ನೀವು ಕೂಡ ನಂಬಿ ಕೆಡುವಂಥ ಪ್ರಯತ್ನ, ತಪ್ಪನ್ನು ಮಾಡಬೇಡಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ಸನ್ಮಾನ್ಯ ಅಧ್ಯಕ್ಷರೇ ನಡೆದಂಥ ಘಟನೆ ಇದರಿಂದ ಯಾರಿಗೆ ಎಷ್ಟು ಲಾಭವಾಗಿದೆಯೋ ನನಗಂತೂ ಗೊತ್ತಿಲ್ಲ. ಅಲ್ಲಿನ ಮಸೀದಿಯನ್ನು ನಾಶ ಮಾಡಿದ್ದರಿಂದ, ಅಲ್ಲಿ ಒಂದು ಶ್ರೀರಾಮನ ವಿಗ್ರಹವನ್ನು ಇಟ್ಟಿದ್ದರಿಂದ ಯಾರಿಗೆ ಎಷ್ಟು ಲಾಭವಾಗಿದೆಯೋ ಗೊತ್ತಿಲ್ಲ. ಆದರೆ ರಾಷ್ಟ್ರಕ್ಕೆ ತನ್ನ ಜಾತ್ಯಾತೀತತೆಯ ಗುಣವನ್ನು ಕಳೆದುಕೊಳ್ಳುತ್ತಿರುವುದರಿಂದ ಅಪಾರ ನಷ್ಟವಾಗಿದೆ. ಇಡೀ ವಿಶ್ವದ ಜನ ಭಾರತ ದೇಶವನ್ನು ಅನುಮಾನ ದೃಷ್ಟಿಯಿಂದ ನೋಡುವಂಥ ಒಂದು ಸಂದರ್ಭ ಸೃಷ್ಟಿಯಾಗಿದೆ. ಎಲ್ಲದಕ್ಕಿಂತಲೂ ಹೆಚ್ಚಿಗೆ ಈ ರಾಷ್ಟ್ರದ ಅಲ್ಪಸಂಖ್ಯಾತರು ತಮಗೆ ನೆಮ್ಮದಿ ಇಲ್ಲವೇನೋ ಈ ದೇಶದಲ್ಲಿ ಬದುಕಲಿಕ್ಕೆ ಎನ್ನುವಂಥ ಭಯ ಸೃಷ್ಟಿಯಾಗಿದೆ. ನೀವು ಯಾರನ್ನು ಕೊಂದಿರಿ ನಿಮಗೆ ಅನ್ಯಾಯ ಮಾಡಿದವರನ್ನು ನೀವು ಕೊಂದಿರೇನು. ಬಾಬರಿ ಮಸೀದಿಯನ್ನು ಒಡೆಯುವುದಕ್ಕೆ ಹೋಗಿದ್ದಂಥ ಯಾವ ಕರಸೇವಕನನ್ನು ಕೊಲ್ಲಲಿಲ್ಲ. ಅಲ್ಲಿ ಶ್ರೀರಾಮನ ದೇವಸ್ಥಾನವಿದೆ ಎಂದು ವಾದ ಮಾಡುವಂಥ ಯಾವುದೇ ಅಲ್ಪಸಂಖ್ಯಾತರನ್ನು ಕೊಲೆ ಮಾಡಲಿಲ್ಲ. ತರಕಾರಿ ಅಂಗಡಿಗೆ ಹೋದಂಥ ಹೆಣ್ಣು ಮಗಳು, ತನ್ನ ವಯಸ್ಕ ಮಗಳನ್ನು ಕರೆದುಕೊಂಡು ಹೋಗುತ್ತಿದ್ದಂಥ ಹಿರಿಯ, ಸಕಲೇಶಪುರದಿಂದ ಹಣ್ಣು ವ್ಯಾಪಾರ ಮಾಡುತ್ತಿದ್ದಂಥ ಒಬ್ಬ ಅಮಾಯಕ. ಇಂಥವರು ಬಲಿಯಾದರು. ಇದರಿಂದ ಯಾರಿಗೆ ಪ್ರಯೋಜನವಾಯಿತು. ಕೊಂದವರಿಗೇನಾದರೂ ಪ್ರಯೋಜನವಾಯಿತೆ ? ಈ ಮತಾಂಧರಿಗ್ಯಾರಿಗೂ ಏನೂ ಸಂಬಂಧವಿಲ್ಲ. ಏತಕ್ಕೆಂದರೆ ಕೊಂದವರು ಯಾರೋ ಆಯೋಗ್ಯರು. ಊರಲ್ಲಿದ್ದಂಥ ಏನೂ ಕಾಣದಂಥ ಬಡಪಾಯಿಗಳು ನೂರಾರು ಜನ ಇವತ್ತು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಹಬ್ಬಿದ ದಳ್ಳುರಿಯಲ್ಲಿ ಸತ್ತವರೆಷ್ಟೋ, ಬದುಕಿದ್ದು ಜೈಲಿನಲ್ಲಿ ಎಷ್ಟೋ ಜನರು ಸಾಯುತ್ತಿದ್ದಾರೆ. ಆದ್ದರಿಂದ ನನ್ನ ಪ್ರಾರ್ಥನೆ ಇಷ್ಟೇ. ಕಾನೂನಿನಿಂದ, ಸಂವಿಧಾನದಿಂದ ಇಂಥ ಕೃತ್ಯಗಳನ್ನು ತಡೆಯಲಿಕ್ಕೆ ಸಾಧ್ಯವಿಲ್ಲ. ಇಂಥ ನಂಬಿಕೆಗಳನ್ನು ನಾಶಮಾಡಲಿಕ್ಕೆ ಸಾಧ್ಯವಿಲ್ಲ. ನಾನು ಈಗಾಗಲೇ ಹೇಳಿದಂತೆ ಇರುವಂಥ ಒಂದೇ ಒಂದು ಮಾರ್ಗ ಈ ರಾಷ್ಟ್ರದ ಜನ, ಇಂಥ ಪ್ರವೃತ್ತಿ ಉಳ್ಳವರು ಪ್ರಬುದ್ಧಮಾನಕ್ಕೆ ಬರದಂಥ ರೀತಿಯಲ್ಲಿ ತಡೆಯತಕ್ಕ ಪ್ರಯತ್ನ ಮಾಡಬೇಕೆಂದು ಈ ಸದನದ ಮುಖಾಂತರ ಪ್ರಾರ್ಥನೆ ಮಾಡಿಕೊಂಡು ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ತಮ್ಮ ಹೇಳಿಕೆಯನ್ನು ಕೊಟ್ಟು ಬಹಳ ವಿಷಾದದ ಒಂದು ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಹಿಂಸಾಚಾರದ ಘಟನೆಯ ಹಿನ್ನೆಲೆಯನ್ನು ಕೂಡ ಅವರು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ದೇಶದ ಜಾತ್ಯಾತೀತ ವ್ಯಕ್ತಿತ್ವ ಏನಿದೆ ಅದಕ್ಕೆ ದಕ್ಕೆ ಬರುವಂಥ ರೀತಿಯಲ್ಲಿ ರಾಜಕೀಯ ದುಷ್ಕರ್ಮಿಗಳು ಕಾರಣಕರ್ತರಾಗಿದ್ದಾರೆಂದು ಹೇಳಿ ಅವರನ್ನು ಖಂಡನೆ ಮಾಡಬೇಕೆಂದು ಕೂಡ ಹೇಳಿದ್ದಾರೆ. ಹಾಗೆಯೇ ನಮ್ಮ ರಾಜ್ಯಮಟ್ಟದಲ್ಲಿ ಈ ದುಷ್ಕರ್ಮಿಗಳ ಹಿಂಸಾಚಾರದ ಘಟನೆಗಳು ನಡೆದು ಬಹಳ ಹಿಂಸೆಗೆ ಜನತೆ ಗುರಿಯಾಗಿದ್ದಾರೆ' ಮತ್ತು ಅವರುಗಳು ತಮ್ಮ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ ಅದಕ್ಕೆ ಸೂಕ್ತ ಪ್ರಮಾಣದಲ್ಲಿ ಪರಿಹಾರವನ್ನು ಸೂಕ್ತ ಸಮಯದಲ್ಲಿ ಕೊಡುವ ವಿಷಯವನ್ನು ಕೂಡ ಹೇಳಿದ್ದಾರೆ. ಹಿಂಸಾಚಾರದ ಘಟನೆಗಳನ್ನು ಯಾವ ರೀತಿ ತಡೆಯಲಿಕ್ಕೆ ಸಾಧ್ಯವಿದೆ ಎಂದು ಕೂಡ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

(ಉಪಾಧ್ಯಕ್ಷಿಣಿಯವರು ಪೀಠವನ್ನಲಂಕರಿಸಿದರು)

ಈ ದುಷ್ಕರ್ಮಿಗಳನ್ನು ಈ ಒಂದು ಘಟನೆಯ ಸಮಯದಲ್ಲಿ ರಾಜ್ಯ ಸರ್ಕಾರ ಯಾವ ರೀತಿ ನಿಯಂತ್ರಣಕ್ಕೆ ತೆಗೆದುಕೊಂಡು ಬಂದಿದೆ ಎಂದು ಹೇಳಿದ್ದಾರೆ, ಅದು ಸೂಕ್ತವಾಗಿದೆ. ಅದಕ್ಕೆ ನಾನು ಅಭಿನಂದಿಸುತ್ತೇನೆ ಮತ್ತು ಏನು ಪರಿಹಾರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ದುಷ್ಕರ್ಮಿಗಳ ಒಂದು ಕಾರಣದಿಂದ ಜನತೆಗೆ ಸಾವು–ನೋವು ಆಗಿದೆ, ಆಸ್ತಿ–ಪಾಸ್ತಿಗಳ ನಷ್ಟವಾಗಿದೆ ಅದಕ್ಕೆ ಕೊಟ್ಟ ಪರಿಹಾರಕ್ಕೆ ಕೂಡ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಪೊಲೀಸ್ ಇಲಾಖೆಯವರು ಈ ಸಂದರ್ಭದಲ್ಲಿ ಸಾಕಷ್ಟು ಹತೋಟಿಗೆ ತಂದಿದ್ದಾರೆಂದು ಹೇಳಿದ್ದಾರೆ. ಈ ಹೇಳಿಕೆಯ ಬಗ್ಗೆ ನಾನಾದರೂ ಒಂದೆರಡು ಮಾತುಗಳಲ್ಲಿ ಬಹಳ ಸಹನೆಯಿಂದ ಮುಖ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಪ್ರಥಮತಃ ಕೆಲವು ಜಿಲ್ಲೆಗಳಲ್ಲಿ, ಕೆಲವು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಏನು ಅತ್ಯಾಚಾರ, ಅನ್ಯಾಯ ನಡೆದಿದೆ ಮತ್ತು ಎಲ್ಲಿ ನಡೆದಿಲ್ಲ ಇಂಥ ಒಂದು ಸಂದರ್ಭಗಳಲ್ಲಿ ಜಾತ್ಯಾತೀತ ಮನೋಭಾವವುಳ್ಳ ಸಮಾಜದಲ್ಲಿ ಶಾಂತಿ ಯಥಾ ಕಾಲಕ್ಕೂ ಉಳಿಯಬೇಕೆನ್ನುವ ಮನೋಭಾವದಿಂದ ಇದ್ದಂಥ ಸಹಸ್ರಾರು ಲಕ್ಷಾಂತರ ಜನತೆ ಈ ರಾಷ್ಟ್ರದ ಒಂದು ಜಾತ್ಯಾತೀತ, ಐಕ್ಯತೆ, ಸಮಗ್ರತೆಯನ್ನು ನಂಬಿರುವಂತಹವರು ಈ ದುರ್ಘಟನೆಗಳಿಗೆ ಆಡಚಣೆ ತರುವಂಥಹ ರೀತಿಯಲ್ಲಿ ತಮ್ಮದೇ ಆದ ಒಂದು ಕಾಣಿಕೆಯನ್ನು ಯಾವ ರೀತಿ ಕೊಟ್ಟು ಸೇವೆ ಮಾಡಿದ್ದಾರೆ ಎಂಬ ಮಾತನ್ನು ಈ ಹೇಳಿಕೆಯಲ್ಲಿ ಹೇಳಿದ್ದರೆ ಬಹಳ ಚೆನ್ನಾಗಿತ್ತು. ಸೆಕ್ಯುಲರ್ ಫೋರ್ಸಸ್ ನಮ್ಮ ಸಮಾಜದಲ್ಲಿ ಬಹುತೇಕ ಆಗಿರುವ ಕಾರಣದಿಂದ ಇಡೀ ರಾಷ್ಟ್ರದಲ್ಲಿ ಅಯೋಧ್ಯೆ ಘಟನೆ ಆದನಂತರ ಇಡೀ ಭಾರತ ಬೆಂಕಿಗೆ ಆಹುತಿ ಆಗಲಿಲ್ಲವೆಂದು ಅರ್ಥ ಮಾಡಿಕೊಳ್ಳಬೇಕಾಯಿತು. ಅಂಥ ಒಂದು ಜಾತ್ಯಾತೀತ ಮನೋಭಾವವುಳ್ಳ, ರಾಷ್ಟ್ರೀಯ ಮನೋಭಾವನೆಯುಳ್ಳ, ರಾಷ್ಟ್ರೀಯ ಐಕ್ಯತೆ ಏಕತೆ ಮನೋಭಾವವುಳ್ಳ ಜನತೆ ಏನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜೊತೆಯಲ್ಲಿ ಸಹಕಾರ ನೀಡಿದ್ದಾರೆ, ಈ ಅತ್ಯಾಚಾರಗಳನ್ನು ಎದುರಿಸಿದ್ದಾರೆ ಎಂಬುದನ್ನು ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಕೊಟ್ಟಿದ್ದರೆ ಚೆನ್ನಾಗಿತ್ತೆಂದು ಭಾವಿಸುತ್ತೇನೆ. ಈ ಹೇಳಿಕೆಯಲ್ಲಿ ಶಿವಾಜಿನಗರದ ಒಂದು ವಿಭಾಗದ ಘಟನೆಯ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಆ ಶಿವಾಜಿನಗರದ ಘಟನೆಗಳನ್ನು ಪ್ರಸ್ತಾಪ ಮಾಡುವಾಗ ಶಿವಾಜಿನಗರದಲ್ಲಿ ಹಿಂಸಾಚಾರಗಳು ನಡೆದಿದ್ದು ಅದನ್ನು ಕೂಡ ಪೊಲೀಸರು ಕಂಟ್ರೋಲಿಗೆ ತೆಗೆದುಕೊಂಡು ಬಂದಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ನಾನು ಶಿವಾಜಿನಗರ ಕ್ಷೇತ್ರದ ಪ್ರತಿನಿಧಿಯಾಗಿ ಮತ್ತು ಐದು ದಿನಗಳ ಕಾಲ ಏನು ಘಟನೆಗಳು ನಡೆದವು ಎಂದು ಹೇಳುತ್ತಾರೆ ಆ ಸಮಯದಲ್ಲಿ ನೇರವಾಗಿ ಜನತೆಯ ಮಧ್ಯೆ ರಾತ್ರಿ ಹಗಲು ಓಡಾಡಿದವನಾಗಿದ್ದೇನೆ. ಪೊಲೀಸ್

ಇಲಾಖೆಯ ಮತ್ತು ಜನತೆಯ ಮಧ್ಯೆ ಇದ್ದವನಾಗಿದ್ದೇನೆ. ಗಾಯಕ್ಕೆ ಈಡಾದಂತ ಜನತೆಯನ್ನು ಆಸ್ಪತ್ರೆಗೆ ಸಾಗಿಸುವ ಕೆಲಸದಲ್ಲಿ ಕೂಡ ಮಗ್ನನಾಗಿದ್ದೇನೆ. ಅಂಗಡಿಗಳಲ್ಲಿ ದರೋಡೆ ಮಾಡುವಂತ ಪ್ರಸಂಗ ಬಂದಾಗ ವೀಕ್ಷಕನಾಗಿದ್ದೇನೆ ಮತ್ತು ಅವರಿಗೆ ರಕ್ಷಣೆ ಕೊಡುವಂತ ಕೆಲಸವನ್ನು ಕೂಡ ಮಾಡಿದ್ದೇನೆ. ನಾನು ಮಾತ್ರ ಮಾಡಿದ್ದಲ್ಲ. ನೂರಾರು ಜನ ಅಂಥ ಒಂದು ಕಾರ್ಯದಲ್ಲಿ ಮಗ್ನರಾಗಿದ್ದರು. ಮತ್ತು ಅಲ್ಲಿ ವಾಸ್ತವಾಂಶ ಹೇಳಬೇಕೆಂದರೆ ಯಾವುದೇ ಒಂದು ರೀತಿಯಾದ ಕಮ್ಯುನಲ್ ಕ್ಲಾಷಸ್ ಎಂದು ಏನು ಹೇಳುತ್ತೇವೆಯೋ ಆ ರೀತಿಯ ಕಮ್ಯುನಲ್ ಕ್ಲಾಷಸ್ ಆಗಲೀ, ಯಾವುದೇ ಒಂದು ಹಿಂಸಾಚಾರವಾಗಲೀ ಆಗಲಿಲ್ಲ ಎಂದು ನಾನು ಬಹಳ ಹೆಮ್ಮೆಯಿಂದ ಹೇಳ ಬಯಸುತ್ತೇನೆ. ಆದುದರಿಂದ ಶಿವಾಜಿನಗರ ಈ ಕಮ್ಯುನಲ್ ಕ್ಲಾಷಸ್‌ಗೆ ಭಾಗಿಯಾಗಿತ್ತು ಎನ್ನುವ ಮಾತನ್ನು ಈ ಹೇಳಿಕೆಯಿಂದ ತೆಗೆಯಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ನನಗೆ ತಿಳಿದ ಹಾಗೆ, ನನ್ನ ಗಮನಕ್ಕೆ ಬಂದ ಹಾಗೆ ಯಾವುದೇ ಒಬ್ಬ ಮತೀಯ ಮತ್ತೊಬ್ಬ ಮತೀಯನಿಗೆ ಒಂದು ಪೆಟ್ಟು ಕೊಟ್ಟಿದ್ದು ಕೇಳಲಿಲ್ಲ. ಚಾಕು ಚೂರಿಯಿಂದ ಹಿರಿತ ಮಾಡಿದ್ದು ಕೇಳಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ಈ ವಿಭಾಗದಲ್ಲಿ ನೆರೆಹೊರೆಯವರಾಗಿ, ಅಕ್ಕಪಕ್ಕದವರಾಗಿ ಅಕ್ಕಪಕ್ಕದ ಮನೆಗಳಲ್ಲಿದ್ದಾರೆ. ಅಲ್ಲಿ ಸಾಕಷ್ಟು ರಕ್ಷಣೆ ಕೊಡುವ ಸಂದರ್ಭವೇ ಬರಲಿಲ್ಲ ಎಂದು ಹೇಳುತ್ತೇನೆ. ದುಷ್ಕರ್ಮಿಗಳು ಹೊರಗಡೆಯಿಂದ ಬಂದು ಹಲ್ಲೆ ಮಾಡುವಾಗ ಆ ವಿಭಾಗದ ಜನರು ಇವರನ್ನು ಎದುರಿಸಿ ನಿಂತಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಲವು ದುಷ್ಕರ್ಮಿಗಳು ಕೆಲವು ಅಂಗಡಿಗಳಿಗೆ ಬೆಂಕಿ ಹಚ್ಚುವುದು, ಲೂಟಿ ಮಾಡುವುದು ಇಂತಹ ಪ್ರಸಂಗ ಬಂದಿತ್ತು, ಇಲ್ಲ ಎಂದು ಹೇಳುವುದಿಲ್ಲ. ಇಂತಹ ಒಂದು ಸನ್ನಿವೇಶಗಳಲ್ಲಿ known sheeted rowdies ಅವರು ಮಾಡಬಾರದ ಕೆಲಸವನ್ನು ಮಾಡುತ್ತಾರೆ. ಲೂಟಿ ಮಾಡಿ ದುರ್ಲಾಭ ಪಡೆಯುವ ಕೆಲಸ ಮಾಡುತ್ತಾರೆ. ಇದು ನಡೆಯುತ್ತದೆಂದು ಹೇಳಿ ಯಾವುದೇ ಒಂದು ಜವಾಬ್ದಾರಿಯುತ ಸರ್ಕಾರಕ್ಕೆ ಗೊತ್ತಿರುತ್ತದೆ. ಇಂತಹ ದುಷ್ಕರ್ಮಿಗಳು ಯಾರಿದ್ದಾರೆ. ಅಷ್ಟು ಜನರನ್ನು known fundamental religious and communal di–hards. ಎನ್ನುವವರನ್ನು ಪೊಲೀಸರು ಅವರ ಕೈಸೆರೆ ತೆಗೆದುಕೊಂಡಿದ್ದರು ಎನ್ನುವುದನ್ನು ಹೇಳಿಕೆಯಲ್ಲಿ ಹೇಳಿದ್ದರೆ ನನಗೆ ಮನಸ್ಸಿಗೆ ನೆಮ್ಮದಿಯಾಗುತ್ತಾ ಇತ್ತು. ಶಿವಾಜಿನಗರದಲ್ಲಿ ಯಾವ ಯಾವ ರೌಡಿಗಳು ಇದ್ದಾರೆ, ಇಂತಹ ಒಂದು ಕೃತ್ಯಗಳಿಗೆ ಕಾರಣಕರ್ತರಾಗುತ್ತಾರೆ, ಅಂಗಡಿಗಳ ಮೇಲೆ ಹಲ್ಲೆ ಮಾಡುತ್ತಾರೆ, ಲೂಟಿ ಮಾಡುತ್ತಾರೆ, ಮೇಲ್ನೋಟಕ್ಕೇ ಸಾರ್ವಜನಿಕವಾಗಿ ಇಂತಹವರು ಯಾರೆಂದು ತಿಳಿದುಬರುತ್ತಾರೆ, ಅಂತಹವರನ್ನು ಮುನ್ನೆಚ್ಚರಿಕೆಯ ಕ್ರಮವಾಗಿ ಹಿಡಿದಿಟ್ಟಂತಹ ಕ್ರಮ ನನಗೆ ಕೇಳಿಬರಲಿಲ್ಲ. ಈ ಅಂಗಡಿಗಳ ಲೂಟಿ ಮಾಡುವಾಗ ಮಾಡಿದವರು ಯಾರೋ, ಓಡಿಹೋದವರು ಯಾರೋ. ಆದರೆ ಅಟ್ಟಿಸಿಕೊಂಡು ಹೋಗುವ ಸಂದರ್ಭದಲ್ಲಿ ಅವರನ್ನು ಹಿಡಿಯುತ್ತೇವೆನ್ನುವ ನೆಪದಿಂದ ಮನೆಮನೆಗೆ ನುಗ್ಗಿ ಹೆಂಗಸರನ್ನು, ಮಕ್ಕಳನ್ನು, ವೃದ್ಧರನ್ನು 2 ವರ್ಷದ ಮಗುವನ್ನೂ ಕೂಡ ಹೊಡೆದಿದ್ದಾರೆ. ಮನೆಯ ಬಾಗಿಲು ಮುರಿದಿದ್ದಾರೆ, ಟೇಬಲ್‌ಗಳನ್ನು ಮುರಿದಿದ್ದಾರೆ, ಕ್ರೋಕರೀಸ್ ಹೊಡೆದಿದ್ದಾರೆ, ಮನೆಯಲ್ಲಿದ್ದ ಟಿ.ವಿ.ಯನ್ನು ಚೂರು ಮಾಡಿದ್ದಾರೆ. ಎಂದ ಮೇಲೆ ಯಾವ ಹಿಂಸಾಚಾರ ಯಾರಿಂದ ಯಾರಿಗೆ ಆಯಿತು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಈ ಮಾತನ್ನು ನಾನು ಆ ವಿಭಾಗದಲ್ಲಿ ಇದ್ದ ಪೊಲೀಸ್ ಅಧಿಕಾರಿಗಳಿಗೆ ಹೇಳಿದ್ದೇನೆ. ನನ್ನ ಜೊತೆಯಲ್ಲಿ ಬನ್ನಿ, ಆ ಮನೆಗಳಿಗೆ ಹೋಗೋಣ, ಏನೇ ಕಾರಣ ಕೊಟ್ಟರೂ ತಮಗೆ ಹೇಳಬೇಕಾದ ಎವಿಡೆನ್ಸ್‌ಗಳನ್ನು ಅಲ್ಲಿನ ಟೇಬಲ್‌ಗಳು ಹೇಳುತ್ತವೆ, ಟಿ.ವಿ.ಗಳು ಹೇಳುತ್ತವೆ, ಕ್ರೋಕರೀಸ್ ಹೇಳುತ್ತವೆ. ಅವೆಲ್ಲಾ ಒಡೆದು ಚೂರುಚೂರುಗಳಾಗಿವೆ. ಈ ಕೃತ್ಯವನ್ನು 2 ವರ್ಷದ ಮಗು ಹೇಳುತ್ತದೆ. ನಮಾಜಿಗೆ ಹೋಗುತ್ತಿದ್ದ 80 ವರ್ಷದ ಮುದುಕ ಏಟು ತಿಂದಿದ್ದು ಆತ ಹೇಳುತ್ತಾನೆ. ಆದರೆ ಇದುವರೆವಿಗೂ ಯಾರೂ ನನ್ನ

ಜೊತೆ ಬರುವುದಕ್ಕೆ ತಯಾರು ಇಲ್ಲ. ಈ ಘಟನೆ ಆದ ಮೇಲೆ ಮನೆ ಮನೆಗೆ ಹೋಗಿ ಬಂದಿದ್ದೇವೆ. ವಿಚಾರ ಮಾಡಿದ್ದೇವೆ. ನಷ್ಟದ ಲಿಸ್ಟ್ ಮಾಡಿದ್ದೇವೆ. ಸಂಬಂಧಪಟ್ಟ ಕಾರ್ಪೊರೇಷನ್ ಕಮೀಷನರ್‌ರಿಗೆ, ಮುಖ್ಯಮಂತ್ರಿಯವರಿಗೆ ಲಿಸ್ಟ್ ಕೊಟ್ಟಿದ್ದೇವೆ. ಪರಿಹಾರವನ್ನೂ ಕೊಟ್ಟಿದ್ದಾರೆ. ಆದರೆ ನಾವು ಒಂದು ಹೇಳಿಕೆ ಕೊಡುವಾಗ ನಮ್ಮ ಸಮಾಜದ ಮನಸ್ಸನ್ನು ತೃಪ್ತಿ ಪಡಿಸುವ ಹೇಳಿಕೆಯನ್ನು ಕೊಡಬೇಕಾಗುತ್ತದೆ.

4.15 ಪಿ.ಎಂ

ಪೊಲೀಸ್‌ನವರಿಂದ ಎಲ್ಲಾ ಸಮಗ್ರವಾಗಿ ಎಲ್ಲಾ ಸರಿಯಾಗಿ ಹೋಯಿತು ಅಂದರೆ ಸಮಾಜದಲ್ಲಿರುವವರನ್ನು ಕೈಬಿಟ್ಟ ಹಾಗೆ ಆಗುತ್ತದೆ. ಈ ಸಮಾಜದಲ್ಲಿ ಬಹುತೇಕ ಜಾತ್ಯಾತೀತ ಮನೋಭಾವನೆ ಉಳ್ಳವರಾಗಿದ್ದಾರೆ. ಮತಾಂತರ ಮನೋಭಾವನೆ ಉಳ್ಳವರಾಗಿದ್ದಾರೆ ರಾಷ್ಟ್ರವನ್ನು ಪೂರ್ಣ ನಂಬಿದವರು ಇದ್ದಾರೆ. ನಮ್ಮ ದೇಶದ ಏಕತೆ, ಭದ್ರತೆ, ಸಮಗ್ರತೆ ಮತ್ತು ರಾಜಕೀಯ ದುರಂತಗಳಿಗೆ ಕಾರಣರಾಗಿರುವ ಬೇಜವಾಬ್ದಾರಿತನದಿಂದ ಕಾನೂನು ಭಂಗ ಉಂಟು ಮಾಡುವಂತಹ ಸಮಾಜಘಾತುಕ ಕೆಲಸ ಮಾಡುವಂತಹ ರಾಜಕೀಯ ದುಷ್ಕರ್ಮಿಗಳು ಏನು ಇದ್ದಾರೆ ಅವರ ವಿರುದ್ಧವಾಗಿ ನಿಲ್ಲುವವರು ಸಾಕಷ್ಟು ಜನರು ಇದ್ದಾರೆ. ಅವರ ವಿಷಯವಾಗಿ ಹೇಳಬೇಕಾಗಿದೆ. ಅದು ಸದಸ್ಯನಾದ ನನ್ನ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ. ದುಷ್ಕರ್ಮಿಗಳು ಬಂದರು ಹಿಂಸಾಚಾರ ನಡೆಯಿತು, ನಡೆದ ಹಿಂಸಾಚಾರವನ್ನು ತಡೆಗಟ್ಟುವುದಕ್ಕೆ ಕೆಲಸ ಮಾಡಿದ್ದೇವೆ. ಮತ್ತೆ ಪರಿಹಾರ ಕೊಟ್ಟಿದ್ದೇವೆಂದು ಹೇಳಿದರೆ ಇಡೀ ಜನಸಮೂಹ ನಿಮ್ಮ ಮೇಲೆ ವಿಶ್ವಾಸದಿಂದ ನಂಬಿಕೆಯಿಂದ ಇದೆ ಅಂದರೆ ಅದನ್ನು ನಾವು ಕೈಬಿಟ್ಟ ಹಾಗೆ ಆಗುತ್ತದೆ. ನಾಳೆ ಅವರು ನಮ್ಮ ಕಡೆ ಮತ್ತೆ ಆಕರ್ಷಣೆಯಾಗಿ ಬರಬೇಕಾದರೆ ಕಷ್ಟವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ನೀವು ಈ ಸಮಯದಲ್ಲಿ ಯಾವ ಹೋರಾಟ ನೋಡುತ್ತಿದ್ದೀರಿ ಯಾವ ಒಂದು ರಾಜಕೀಯ ದುಷ್ಕರ್ಮಿಗಳು ಇದ್ದಾರೆ ಜಾತೀಯತೆಯನ್ನು ಹರಡುತ್ತಿದ್ದಾರೆ ವಿಷಬೀಜ ಹರಿದುಹೋಗುವಂತೆ ಮಾಡುತ್ತಿದ್ದಾರೆ ಅವರ ವಿರುದ್ಧ ನಾವು ಹೋರಾಟ ಮಾಡಬೇಕೆಂದು ಹೇಳಿದರೆ ಜನತೆಯ ಒಂದು ಶಕ್ತಿಯನ್ನು ತೆಗೆದುಕೊಂಡು ಹೋದರೆ ಹೋರಾಟ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಜನತೆಯನ್ನು ಜಾಗೃತಗೊಳಿಸಿದರೆ ಮಾತ್ರ ಅವರ ಎದುರಿಗೆ ನಿಲ್ಲಿಸಿ ಹೋರಾಟ ಮಾಡಬೇಕಾಗಿ ಬರುತ್ತದೆ. ಜನತೆಯನ್ನು ತಪ್ಪು ಮಾರ್ಗಕ್ಕೆ ಇಳಿಸಿ ದೇವರ ಹೆಸರಿನಲ್ಲಿ ಮಸೀದಿಯ ಹೆಸರಿನಲ್ಲಿ ದೇಶವನ್ನು ಅಧೋಗತಿಗೆ ತರುವಂತಹವರ ವಿರುದ್ಧ ನಾವು ಹೋರಾಟ ಮಾಡಬೇಕಾದರೆ ಈ ಭರತ ಖಂಡದ 70–80 ಕೋಟಿ ಜನರ ಶಕ್ತಿಯನ್ನು ನಾವು ಪ್ರಯೋಗ ಮಾಡಿ ಈ ರಾಜಕೀಯ ದುಷ್ಕರ್ಮಿಗಳನ್ನು ನಾವು ಮುಕ್ತಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಸಂದರ್ಭದಲ್ಲಿ ಜನತೆಗೆ ಒಂದು ಕರೆಯನ್ನು ಕೊಡಬೇಕಾಗಿದೆ. ಯಾರು ಈ ರಾಷ್ಟ್ರದ ಏಕತೆಗೆ ಸಮಗ್ರತೆಗೆ ಮತ್ತು ಜಾತ್ಯಾತೀತೆಗೆ ಹೋರಾಟ ಮಾಡುತ್ತಿದ್ದಾರೆ ಅದಕ್ಕೆ ಸಂಘಟನೆಯಾಗಬೇಕೆಂದು ಇದ್ದಾರೆ ಅಂತಹವರೆಲ್ಲಾ ಸಂಘಟಿತರಾಗಿ ರಾಜಕೀಯ ದುಷ್ಕರ್ಮಿಗಳನ್ನು ಮುಕ್ತಾಯ ಮಾಡುವಂತಹ ಕೆಲಸವನ್ನು ಮಾಡಬೇಕು. ಮತ್ತು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಜಾಗೃತರಾಗಿ ಅವರೇನು ನಮ್ಮ ವಿರುದ್ಧವಾಗಿ ಪ್ರಚಾರ ಮಾಡುತ್ತಿದ್ದಾರೆ ಅವರಿಗೆ ಸೂಕ್ತ ಎಚ್ಚರಿಕೆಯನ್ನು ಕೊಟ್ಟು ಅವರಿಗೆ ಜ್ಞಾನೋದಯ ಮಾಡುವಂತಹ ಪ್ರಯತ್ನವನ್ನು ಸಾಮೂಹಿಕವಾಗಿ ಮಾಡಬೇಕಾದದ್ದು ನಮ್ಮ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ.

ಈ ಸಮಯದಲ್ಲಿ ಒಂದು ಶ್ಲಾಘನೀಯವಾದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಾವು ನೋವುಗಳಾದ ಕಡೆಯಲ್ಲಿ ಯಾವುದೇ ಕೃತ್ಯಗಳು ನಡೆದಿರಲಿ ಅಂತಹ ಸಮಯದಲ್ಲಿ ಸಾಕಷ್ಟು ಜನ

ಶಿವಾಜಿನಗರ ವಿಭಾಗದಲ್ಲಿ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಜನತೆಯಲ್ಲಿ ಯಾವುದೇ ಮತಭೇದವಿಲ್ಲದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಬ್ಲಡ್ ಡೋನೇಷನ್ ನೂರಾರು ಜನರು ಕೊಟ್ಟಿದ್ದಾರೆ. ಮೆಡಿಕಲ್ ರಿಲೀಫ್‌ನ್ನು ಸಹ ಕೊಟ್ಟಿದ್ದಾರೆ. ಪ್ರೈವೇಟ್ ಮೆಡಿಕಲ್ ವ್ಯಾನುಗಳನ್ನು ಕೊಟ್ಟಿದ್ದಾರೆ. ರೆಡ್‌ಕ್ರಾಸ್ ವ್ಯಾನ್ ತರಹ ಇಟ್ಟುಕೊಂಡು ರಾತ್ರಿ ಹಗಲು ದುಡಿದಿದ್ದಾರೆ. ಅವರ ವಿಷಯವಾಗಿ ಹೇಳಬೇಕಾದದ್ದು ಅವರಿಗೆ ಅಭಿನಂದನೆಗಳನ್ನು ಅರ್ಪಿಸಬೇಕಾದದ್ದು ನಮ್ಮ ಈ ಸಭೆಯ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಮಯದಲ್ಲಿ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಜನತೆಗೆ ಅಭಿನಂದನೆಯನ್ನು ಅರ್ಪಿಸಬೇಕೆನ್ನುವ ಮಾತನ್ನು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. It is not only the secular character of our masses; people who stood against the onslaught of the communel based political parties, they have also stood by us in preventing much worse disaster that could have taken place. ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಇದನ್ನು ಹೇಳುತ್ತಿದ್ದೇನೆ. ಗುಂಡಿನೇಟಿಗೆ ಸತ್ತವರಿಗೆ 1 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಬಹಳ ಪ್ರಾಮಾಣಿಕವಾಗಿ ಮತ್ತು ಎಫಿಷಿಯೆಂಟಾಗಿ ಮಾಡಿದ್ದಾರೆ. ಯಾವ ರಾಜಕಾರಣಿ ಬಂದು ಕೇಳಬೇಕಾದ ಅವಕಾಶವಿರಲಿಲ್ಲ. ಸಮಾಜದ ಕಡೆಯಿಂದ ಯಾರೂ ಬಂದು ಕೇಳಬೇಕಾಗಿರಲಿಲ್ಲ. ಬಹಳ ವೇಗವಾಗಿ ಮಾಡಿದ್ದಾರೆ. ಅತಿ ವೇಗವಾಗಿ ಮಾಡಿದ್ದಾರೆ. ಆದರೆ ನಮ್ಮ ಪ್ರಧಾನಮಂತ್ರಿಯವರು ಎರಡು ಲಕ್ಷ ರೂಪಾಯಿ ಪರಿಹಾರ ಕೊಡಬೇಕು ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಎರಡು ಲಕ್ಷ ರೂಪಾಯಿ ಪರಿಹಾರ ಧನವನ್ನು ನಮ್ಮ ರಾಜ್ಯದ ಮಟ್ಟಿಗೆ ಕೂಡ ಸೀಮಿತ ಮಾಡಿ ಸತ್ತವರ ಮನೆತನದವರಿಗೆ ಕೊಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಹಾಗೆಯೇ ಯಾರು ನೋವು ತಿಂದಿದ್ದಾರೆ, ಇಂಜೂರ್ಡ್ ಪರ್ಸನ್ಸ್ ಎಂದು ಏನು ಹೇಳುತ್ತೇವೆ, ಅವರಿಗೆ ಕೇವಲ ಎರಡೂವರೆ ಸಾವಿರ ಮಾಕ್ಸಿಮಮ್ ಎಂದು ಹೇಳಿ ಕೊಟ್ಟಿದ್ದಾರೆ. ಕೆಲವು ಕೇಸ್‌ಗಳಲ್ಲಿ ಆ ಎರಡೂವರೆ ಸಾವಿರ ರೂಪಾಯಿ ಎರಡು ದಿನದ ಮೆಡಿಕಲ್ ಟ್ರೀಟ್‌ಮೆಂಟ್‌ಗೆ ಸಾಕಾಗುವುದಿಲ್ಲ. ಅಂತಹವರು ಹೆಚ್ಚಿನ ಮೆಡಿಕಲ್ ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕಾದರೆ ಯಾವ ರೀತಿ ಪರಿಹಾರ ಕೊಡಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸತ್ತವರ ವಿಷಯದಲ್ಲಿ ತೀವ್ರವಾಗಿ ಯೋಚನೆ ಮಾಡಿ, ಈ ಇಂಜೂರ್ಡ್ ಪರ್ಸನ್ಸ್ ಏನಿದ್ದಾರೆ .....

ಒಬ್ಬ ಮಾನ್ಯ ಸದಸ್ಯರು:– ಅವರು ಸರ್ಕಾರಕ್ಕೆ ವಿವರಗಳನ್ನು ಕೊಡುತ್ತಿದ್ದಾರೆ. ಆದರೆ ಸರ್ಕಾರದಲ್ಲಿ ಬರೆದುಕೊಂಡು ಹೇಳತಕ್ಕವರು ಯಾರೂ ಕಾಣುತ್ತಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:– ತಾವು ನನಗೆ ಅಡಚಣೆ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್ಕಾರ ಏನು ಮಾಡಬೇಕು ಎಂದಿದೆಯೋ, ಅದನ್ನು ಅವರ ಕೈಯಲ್ಲಿ ಹೇಳಿಸುತ್ತಿದ್ದಾರೆ. ಅವರು ಬರೆದುಕೊಳ್ಳುವುದು ಮತ್ತೆ ಏಕೆ ?

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ:– ಈ ಪರಿಹಾರಧನವನ್ನು ಎಷ್ಟು ಅವಶ್ಯಕತೆ ಇದೆಯೋ, ಅಷ್ಟನ್ನು ಕೊಡಬೇಕಾದದ್ದು ನಮ್ಮ ಸಮಾಜವನ್ನು ಪ್ರತಿಬಿಂಬಿಸುವ ಸರ್ಕಾರದ ಆದ್ಯಕರ್ತವ್ಯವೆಂದು ನಾನು ಭಾವಿಸುತ್ತೇನೆ. ಅದನ್ನು ಜಾಸ್ತಿ ಮಾಡಬೇಕೆಂದು ಕೂಡ ನಾನು ಕೇಳಿಕೊಳ್ಳುತ್ತಿದ್ದೇನೆ. ಹಾಗೆಯೇ ಕಾರುಗಳು, ಸ್ಕೂಟರ್‌ಗಳನ್ನು ಭಸ್ಮ ಮಾಡಿದ್ದಾರೆ. ಅದರ ವಿಷಯವಾಗಿ ಪರಿಹಾರ ಕೊಡಬೇಕು ಎಂದು ಹೇಳಿದರೆ ಇನ್‌ಶೂರೆನ್ಸ್ ಕಂಪನಿಯಿಂದ ಕ್ಲೇಮ್ ಮಾಡಲಿ ಎನ್ನುವ ಮಾತನ್ನು ಹೇಳುತ್ತಾರೆ.

ಇನ್‌ಶೂರೆನ್ಸ್ ಕೆಲವರು ಮಾಡಿರುತ್ತಾರೆ, ಇನ್ನು ಕೆಲವರು ಮಾಡಿರುವುದಿಲ್ಲ. ಮಾಡಿದ್ದರೂ ಕೂಡ ನೂರಕ್ಕೆ ನೂರರಷ್ಟು ಯಾರೂ ಇನ್‌ಶುರೆನ್ಸ್ ಕಂಪನಿಯವರು ಕಾಂಪನ್‌ಸೇಶನ್ ಕೊಡುವುದಿಲ್ಲ. ಅದಕ್ಕೆ ಮಾರ್ಕೆಟ್ ವ್ಯಾಲ್ಯು ಅಂತ ಕೊಡಲಿ ಚಿಂತೆ ಇಲ್ಲ. ಆದರೆ ಡಿಪ್ರಿಸಿಯೇಶನ್ ಅಂತ ಕೊಡುತ್ತಾರೆ. ಮತ್ತು ಕೆಲವು ವೆಹಿಕಲ್ ಭಾಗಗಳಿಗೆ ಕೊಡುವುದಿಲ್ಲ. ಅಂದ ಮೇಲೆ ನೊಂದವರಿಗೆ ಪರಿಹಾರ ಯಾವ ಸೂಕ್ತ ಪ್ರಮಾಣದಲ್ಲಿ ಕೊಡಬೇಕೋ, ಅದನ್ನು ವಿಮಾ ಕಂಪನಿಯವರು ಕೊಡುವುದಿಲ್ಲ. ಅದನ್ನು ಸರಿಯಾಗಿ ವಿಚಾರಣೆ ಮಾಡಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಏನು ಕಮ್ಯುನಲ್ ಫಂಡಮೆಂಟಲಿಸ್ಟ್ ಕ್ಯಾರೆಕ್ಟರ್, ಏನು ಈ ರಾಷ್ಟ್ರದ ಸೆಕ್ಯುಲರಿಸಂನ್ನು ಧ್ವಂಸ ಮಾಡಿದ್ದಾರೆ, ಈ ನಮ್ಮ ರಾಷ್ಟ್ರದ ಒಂದು ಭಾಗದ ಮತೀಯರಿಗೆ ಮನಸ್ಸನ್ನು ನೋಯಿಸಿದ್ದಾರೆ, ಅವರ ಧರ್ಮಕ್ಕೆ ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ, ಇಂತಹ ಒಂದು ದುಷ್ಟ ರಾಜಕೀಯ ಶಕ್ತಿಗಳನ್ನು ಕೇವಲ ನಾವು ಸ್ಟೇಟ್‌ಮೆಂಟ್ ಮೂಲಕ ಕಂಡೇಮ್ ಮಾಡಿದರೆ ಸಾಲದು. ಇಡೀ ಜಗತ್ತಿಗೇ ಗೊತ್ತಾಗುವ ರೀತಿಯಲ್ಲಿ ಕರ್ನಾಟಕ ರಾಜ್ಯದ ಜನತೆ ಈ ಕಮ್ಯುನಲ್ ಫಂಡಮೆಂಟಲ್ ಕ್ಯಾರೆಕ್ಟರ್ ಏನಿದೆ, ರಾಷ್ಟ್ರ ಧ್ವಂಸ ಮಾಡುವಂಥ ಒಂದು ಭೀತಿ ಏನಿದೆ, ಅದರ ವಿರುದ್ಧ ನಾವು ಬಹಳ ಸೂಕ್ತವಾದ ಒಂದು ಠರಾವನ್ನು ಜನರಿಗೆ ಜಾಗ್ರತಗೊಳಿಸುವಂಥ ರೀತಿಯಲ್ಲಿ ಇಲ್ಲಿಂದ ಪಾಸ್ ಮಾಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಮಾನ್ಯಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಕೇವಲ ಜವಾಬು ಕೊಟ್ಟರೆ ಮಾತ್ರ ಸಾಲದು. ಇಡೀ ಸಭೆಯಲ್ಲಿ ಯಾರು ಈ ಅಯೋಧ್ಯೆ ಕರ್ಮಕಾಂಡಕ್ಕೆ ಜವಾಬ್ದಾರಿಯಾಗಿದ್ದಾರೆ, ಯಾವ ವಿಷಯದಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿಕೊಳ್ಳುತ್ತಿದ್ದಾರೆ, ಅವರು ಸೇರಿದರೆ ಸರಿ. ಇಲ್ಲದೇ ಅವರು 4 ಜನ ಬಿಟ್ಟು ಉಳಿದ ಇಡೀ ಸದನ ಇಂತಹ ಒಂದು ಠರಾವನ್ನು ಇಲ್ಲಿ ಪಾಸ್ ಮಾಡಿದ್ದೇವೆಂದು ಹೇಳಿದರೆ, ಕರ್ನಾಟಕ ರಾಜ್ಯದ 4 ಕೋಟಿ ಚಿಲ್ಲರೆ ಜನ ಎಂತಹ ಜಾತ್ಯಾತೀತ ಜನ ಎಂದು ಇಡೀ ದೇಶಕ್ಕೆ ಚೆನ್ನಾಗಿ ಅರ್ಥವಾಗುತ್ತದೆ. ಮತ್ತು ಇಡೀ ದೇಶದಲ್ಲಿ, ಈ ತರಹ ಜಾತ್ಯಾತೀತ ಜೀವನವನ್ನು ನಡೆಸಬೇಕು, ರಾಷ್ಟ್ರ ಇಂತಹವರ ಕೈಯಿಂದ ಏನು ವಿಪತ್ತಿಗೆ ಬರುತ್ತದೆ, ಅಂತಹವರಿಂದ ದೂರ ಸರಿಯಬೇಕೆಂದು ಹೇಳುವುದಕ್ಕೆ ಅನುಕೂಲವಾಗುತ್ತದೆ. ಇಂತಹ ಒಂದು ಠರಾವನ್ನು ನಾವು ಇಲ್ಲಿ ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಹಿರಿಯ ಸದಸ್ಯರೆಲ್ಲರೂ ಸಾಕಷ್ಟು ಹೇಳಿದ್ದಾರೆ. ನಾನು ಅದೇ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಒಂದು ಪ್ರಶ್ನೆಯನ್ನು ಭಾರತೀಯ ಜನತಾಪಾರ್ಟಿಯವರಲ್ಲಿ ಬಹಳ ಸವಿನಯವಾಗಿ ಕೇಳಬೇಕೆಂದಿದ್ದೇನೆ. ಈ ಭಾರತೀಯ ಜನತಾ ಪಾರ್ಟಿ ಎಂದು ಹೇಳುವಾಗ, ಭಾರತೀಯ ಎಂದ ಮೇಲೆ, ಅವರ ಮನಸ್ಸಿನಲ್ಲಿರತಕ್ಕ ಭಾರತ ಯಾವುದು, ಅದರ ಆಕಾರ ಏನು, ಆ ಭಾರತದಲ್ಲಿ ಇರತಕ್ಕ ಜನಸಂಖ್ಯೆ ಯಾರು ? ಯಾವ ಯಾವ ಜನ, ಯಾವ ಯಾವ ತರಹ ಇರಬೇಕಾಗಿದೆ. ಈ ಭಾರತೀಯ ಜನತಾ ಪಾರ್ಟಿಯವರು ನಮ್ಮ ಸಂವಿಧಾನದಲ್ಲಿ ಏನೊಂದು ಈಕ್ವಲ್ ರೈಟ್ಸ್ ಹೇಳುತ್ತಾರೆ .....

ಒಬ್ಬ ಮಾನ್ಯ ಸದಸ್ಯರು:– ನಿಮ್ಮ ಕಲ್ಪನೆ, ಭಾರತ ವಿಭಜನೆ ಆಗುವುದಕ್ಕೆ ಮುಂಚೆ ಇದ್ದದ್ದು...

ಶ್ರೀ ಎ.ಕೆ. ಅನಂತಕೃಷ್ಣ:– ಅದು ನನಗೆ ಗೊತ್ತಿದೆ. ವಿಭಜನೆ ಆಗುವುದಕ್ಕೆ ಮುಂಚೆ ನಾನೂ ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಬಹಳವಾಗಿ ಮಗ್ನನಾಗಿದ್ದೆ. ಆಗ ಏನು ಹಿಂದೂ ಸಮಾಜ ಎಂದು, ವೀರ ಸಾವರ್‌ಕರ್ ಅಂಥವರ ನೇತೃತ್ವದಲ್ಲಿ ಮಾಡಿದರು, ಅದನ್ನೂ ನಾನು ನೋಡಿದ್ದೇನೆ ....

ಒಬ್ಬ ಮಾನ್ಯ ಸದಸ್ಯರು:– ಇಂತಹವರ ಬಾಯಲ್ಲಿ ಏನೇನೋ ಬರುತ್ತಿದೆ .....

ಶ್ರೀ ಎ.ಕೆ. ಅನಂತಕೃಷ್ಣ:– ಇಂತಹವರ ಬಾಯಲ್ಲಿ ಬಂದಿಲ್ಲ. But the day, the way the Veer savarkar changed from one of a secular nationalist to that of a communal

leader, he is not known today in the history of the country. If that goes, you are just following his negative path. Forgive me. So the country is very clear as to who should adopt as its national leader for a long time. ಭಾರತೀಯ ಜನತಾ ಪಾರ್ಟಿ ಎಂದು ಹೇಳಿದರೆ, ಇದರಲ್ಲಿ ಭಾರತೀಯ ಯಾರು ? ಅವರ ಪಾರ್ಟಿಯ ನೇತೃತ್ವದಲ್ಲಿ, ಅವರ ಒಂದು ಪ್ರೊಟೆಕ್ಷನ್‌ನಲ್ಲಿ ಯಾವ ಯಾವ ವಿಭಾಗಕ್ಕೆ ಯಾವ ರೀತಿ ಮಾಡುತ್ತಾರೆ ಎನ್ನುವುದನ್ನು ನೋಡಬೇಕು. ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಏನು ಮಾಡಿದ್ದಾರೆ ಮತ್ತು ರಾಮನ ದೇವಸ್ಥಾನ ಕಟ್ಟುವ ವಿಷಯದಲ್ಲಿ ಇಡೀ ಭಾರತಕ್ಕೆ ಬೆಂಕಿಯನ್ನು ಹಚ್ಚಿದ್ದಾರೆ. ಇದರಿಂದ ಗೊತ್ತಾಗುತ್ತದೆ. ಇವರ ಭಾರತ ಏನು ಎಂದು. You can very well reflect what should be the future of India.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದನ್ನು ತೆಗೆದು, ಅಲ್ಲಿಯೇ ಮಸೀದಿ ಕಟ್ಟೋಣ ಎಂದು ಒಂದು ನಿರ್ಣಯ ಮಾಡೋಣ, ನೀವು ಮೂವ್ ಮಾಡಿ. ನಾನು ತಮಗೆ ಸಲಹೆ ಕೊಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಏನು ಮಾಡಬೇಕೆಂದು ಹೇಳುತ್ತೇನೆ. ನಿಮ್ಮ ಸಲಹೆ ನನಗೆ ಏಕೆ ಬೇಕು ? ನಿಮ್ಮ ಸಲಹೆ ಕೇಳಿದರೆ, ದೇಶ ಬೆಂಕಿಯಲ್ಲಿ ಉರಿಯುತ್ತದೆ. ನೀವು ನನಗೆ ಹೇಳುವುದಕ್ಕೆ ಹೋಗಬೇಡಿ. I know you and the path you are following and your voluntary actions from my childhood and I have fought step by step every time. So, I don't need to be told about it. Let them define what is that Bharath? What does Bharatiya Janatha Party reflect? What is the kind of treatment that you would give to all citizens of India under the present Constitution or would they destroy the Constitution as much as they ignore the Constitution today. The Constitutionally–created Supreme Court has been ignored. The constitutionally–created High Court in Allahabad has been ignored. The constitutionally–created Government of India and the Prime Minister to whom word has been given, they have ignored. They have gone back. What kind of a Constitution of this Country are they going to respect? ದಯಮಾಡಿ, ಇದನ್ನು ಅರ್ಥ ಮಾಡಿಕೊಳ್ಳಬೇಕು. The people of this Country must know them thoroughly. It is difficult for him to have an extra eye. But, atleast when we make a proper surgery on your political character that the people will come to know what the anatomy is. ಕ್ಷಮಿಸಬೇಕು, ನಾನು ಶಾಂತ ರೀತಿಯಿಂದಲೇ ಇರುತ್ತೇನೆ. ಆದರೆ, ಶಾಂತಿಯನ್ನು ಬೆಂಕಿಯನ್ನಾಗಿ ಮಾಡಿದಂತಹವರ ಹತ್ತಿರ ಮಾತನಾಡಬೇಕಾಗಿದ್ದರೆ, ಅದು ಯಾವ ಭಾಷೆಯಲ್ಲಿ ಹೇಳಬೇಕೋ, ಹೇಗೆ ಹೇಳಬೇಕೋ ಹಾಗೆಯೇ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:– ಗೋಲಿಬಾರ್ ನಡೆಯುತ್ತಿದ್ದರೂ ಶಾಂತಿಯಿಂದ ಇರಬೇಕು.....

ಶ್ರೀ ಶಿವಾನಂದ ಕೌಜಲಗಿ:– ಶಾಂತವಾಗಿ ಗೋಲಿಬಾರ್ ಆಗಬೇಕು.

ಶ್ರೀ ಎ.ಕೆ. ಅನಂತಕೃಷ್ಣ:– ಮಾಡುವವರು ಶಾಂತವಾಗಿ ಮಾಡುತ್ತಾರೆ ಏಟು ತಿಂದವನಿಗೇ ಅಶಾಂತಿ. ಒಂದು ಮುಖ್ಯವಾದ ವಿಷಯ 1977ರಲ್ಲಿ ನಮ್ಮ ಆರ್.ಎಸ್.ಎಸ್. ಬೇಸ್ಡ್ ಜನಸಂಘದವರು ಬಿ.ಜೆ.ಪಿ. ಆದರಲ್ಲಾ ಆಗ, ಆಗ ನಾನು ಬೆಂಗಳೂರು ನಗರದಲ್ಲಿ ದೊಡ್ಡ ದೊಡ್ಡ ಪೋಸ್ಟರ್‌ಗಳಲ್ಲಿ ನೋಡಿದೆ. "ಅಂದು ಗಾಂಧಿ, ಇಂದು ಜೆ.ಪಿ" ಎಂದು ಇತ್ತು. ಅಂದಿನ ಗಾಂಧಿಯನ್ನು

ಗಾಂಧಿಯನ್ ಸೋಷಿಯಲಿಸಂ ಎಂದು ಹೇಳಿ ಬಿ.ಜೆ.ಪಿ. ಪಕ್ಷ ಉದ್ಭವವಾಯಿತು. ಇಂದು ಹೇಳಿದ ಒಂದು ಜೆ.ಪಿ. ಆ ಜೆ.ಪಿ.ಯ ಸಮಾಜವಾದ ಸಮಾಧಿ ಆಯಿತು. ಜಾತ್ಯಾತೀತ ಜೀವನವನ್ನು ಸಮಾಧಿ ಮಾಡಿದರು. ಆ ಬಿ.ಜೆ.ಪಿ.ಯವರ ಒಂದು ಪೊಲಿಟಿಕಲ್ ಕ್ಯಾರೆಕ್ಟರ್ the inner core of their honesty sense of loyalty, patriotism to Gandhi and J.P. is that. ಇದನ್ನು.....

(INTERRUPTION)

ಶ್ರೀ ಬಿ.ಎಸ್. ಯಡಿಯೂರಪ್ಪ:– ಅನಂತಕೃಷ್ಣರವರೇ, ಒಂದು ನಿಮಿಷ ಈಲ್ಡ್ ಆಗುತ್ತೀರಾ ?

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಹೇಳಿದ ಮೇಲೆ ತಾವು ಮಾತನಾಡುವುದಕ್ಕೆ ಅವಕಾಶ ಆಗುತ್ತದೆ. ಅಧ್ಯಕ್ಷಿಣಿಯವರನ್ನು ಕೇಳಿ ತೆಗೆದುಕೊಳ್ಳಿ.

ಡಾ. ಜೀವರಾಜ ಆಳ್ವ:– ಅನಂತಕೃಷ್ಣರವರೇ, very relevant. You can yield for me.

MADAM DEPUTY SPEAKER:– He is not yielding.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಗಾಂಧಿಯನ್ನು ಫಾಲೋ ಮಾಡಿದವನು. ಗಾಂಧೀಜಿಯವರನ್ನು ಕೊಲೆ ಮಾಡಿದವರ ಜೊತೆಯಲ್ಲಿ ಇದ್ದವನಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಜಲಿಂಗಪ್ಪನವರು, ಗಾಂಧೀಜಿಯವರ ತತ್ವಗಳು ಏನಾಗಿದೆ ಎಂದು ಹೇಳಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ:– ಆವತ್ತು ಗಾಂಧಿಯನ್ನು ಕೊಲೆ ಮಾಡಿದವರನ್ನು ಅಟ್ಟಿ ಅಟ್ಟಿ ಹೊಡೆದವನು ನಾನು. ಆದುದರಿಂದ ನಾನು ಅವರ ಸಹವಾಸ ಮಾಡಿದವನೂ ಅಲ್ಲ, ಭವಿಷ್ಯದಲ್ಲಿ ಮಾಡುವವನೂ ಅಲ್ಲ. ಮತ್ತು ಜೆ.ಪಿ. ಹೆಸರಿನಲ್ಲಿ ಏನು ದುರ್ಮಾರ್ಗಗಳತ್ತ ತಾವು ಹೊರಳುತ್ತಿದ್ದೀರಿ, ಆ ಜೆ.ಪಿ.ಯ ಫಾಲೋಯರ್ ಆಗಿದ್ದವನು ನಾನು. ಜೆ.ಪಿ. ಅವರ ಸಹವಾಸದಲ್ಲಿ, ಜೆ.ಪಿ.ಯವರ ನಾಯಕತ್ವದಲ್ಲಿ ಸಮಾಜವಾದವನ್ನು ಅಪ್ಪಿ ಸಮಾಜವಾದಿಯಾಗಿ ಜೀವನದಲ್ಲಿ ನಡೆದುಕೊಂಡು ಬಂದವನು. ಜೆ.ಪಿ. ವಿಷಯ ಆಗಿರಲಿ, ಜೆ.ಪಿ. ಅವರ ಸರ್ವೋದಯ ವಿಷಯ ಆಗಿರಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಜೆ.ಪಿ. ಅವರನ್ನು ಜೈಲಿನಲ್ಲಿಟ್ಟು ಜೀವಂತವಾಗಿ ಕೊಲೆ ಮಾಡಿದವರು ನೀವು.

ಶ್ರೀ ಎ.ಕೆ. ಅನಂತಕೃಷ್ಣ:– ಅದು ಬೇರೆ ವಿಷಯ. ಆ ಸಂದರ್ಭ ಬಂದಾಗ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರನ್ನು ಜೈಲಿನಲ್ಲಿಟ್ಟು ಕೊಲೆ ಮಾಡಿದವರು ನೀವು, ಅವರ ಹೆಸರನ್ನು ಹೇಳುವ ನೈತಿಕ ಹಕ್ಕು ನಿಮಗೆ ಏನಿದೆ. ಮಹಾತ್ಮಾ ಗಾಂಧೀಜಿಯವರ ವಿಚಾರಗಳಿಗೆ ತಿಲಾಂಜಲಿ ಕೊಟ್ಟಂತಹ ಜನ ನೀವು. ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳುತ್ತಿದ್ದೀರಾ ?

ಶ್ರೀ ಎ.ಕೆ. ಅನಂತಕೃಷ್ಣ:– ಜೆ.ಪಿ. ಅವರ ಹೆಸರನ್ನು ಹೇಳುವ ಹಕ್ಕು ನನಗೆ ಇವತ್ತಿಗೂ ಇದೆ.

ಡಾ. ಜೀವರಾಜ ಆಳ್ವ:– ನಿಮಗೆ ಇದೆ, ನಿಮ್ಮ ಪಕ್ಷಕ್ಕೆ ಇಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:– ನಾನೇ ಮಾತನಾಡುತ್ತಾ ಇರುವುದು, ನನ್ನ ಪಕ್ಷಕ್ಕೂ ಇದೆ. ಯಾವಾಗ ಏಕಮುಖದ ಅಭಿಪ್ರಾಯಗಳು ಭಿನ್ನಾಭಿಪ್ರಾಯಕ್ಕೆ ಕಾರಣ ಆಯಿತೋ, ಆಗ ಭಿನ್ನಾಭಿಪ್ರಾಯಗಳು ಉಂಟಾಗಿ, ಒಬ್ಬರಿಗೊಬ್ಬರಿಗೆ ವೈಮನಸ್ಯ ಬೆಳೆದು ಬರುತ್ತದೆ. ಆ ವೈಮನಸ್ಯ ಬೆಳೆದ ಸಂದರ್ಭದಲ್ಲಿ

ಅದನ್ನು ಗಮನದಲ್ಲಿಟ್ಟುಕೊಂಡು, ಹಳೆಯ ಚರಿತ್ರೆಯನ್ನು ಮರೆಯುವುದೇ ಆಗಿರಲಿ. ಇದರಿಂದ ಕಲಿತಂಥ ಪಾಠವೇ ಆಗಿರಲಿ, ಭವಿಷ್ಯದ ಒಂದು ಕಲ್ಯಾಣ ದೃಷ್ಟಿಯಿಂದ ಆಗಿರಲಿ, ಇದನ್ನು ಮರೆತು ಈ ಮಾತನ್ನು ಹೇಳುವುದು ಸೂಕ್ತವಾಗಿರುವುದಿಲ್ಲ ಎಂದು ಹೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಅನಂತಕೃಷ್ಣರವರೇ,

ಶ್ರೀ ಎಚ್. ವಿಶ್ವನಾಥಯ್ಯ:– ಈಗ ಕಷ್ಟಕ್ಕೆ ಬಂತು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇಲ್ಲ ಇಲ್ಲ, ಒಬ್ಬ ಸಮಾಜವಾದಿ ಇನ್ನೊಬ್ಬ ಸಮಾಜವಾದಿಗೆ ಈಲ್ಡ್ ಆಗಿದ್ದಾರೆ. ಒಂದು ವಿನಂತಿ ನಾನು ಅನಂತಕೃಷ್ಣ ಅವರಿಗೆ ಮಾಡಿಕೊಳ್ಳುವುದು, ಅಯೋಧ್ಯೆ ಬಗ್ಗೆ ಚರ್ಚೆ ಯಾವತ್ತಿನಿಂದ ಪ್ರಾರಂಭವಾಯಿತು, ಎಲ್ಲರೂ ಪಕ್ಷದ ಒಂದು ಹಣೆಪಟ್ಟಿಯನ್ನು ಮರೆತೆ ಮಾತನಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆ ಅನಂತಕೃಷ್ಣ ಅವರು ಭಾವಿಸಿ, ಜೆ.ಪಿ. ಅವರ ಹೆಸರನ್ನು ಹೇಳುವುದಕ್ಕೆ ನನಗೆ ನೈತಿಕ ಹಕ್ಕು ಇದೆ ಎಂದು ಹೇಳಿದರೆ ಒಳ್ಳೆಯದೆಂದು ಅನ್ನಿಸುತ್ತದೆ. ಏತಕ್ಕೆಂದರೆ ಕಾಂಗ್ರೆಸ್ ಪಕ್ಷಕ್ಕೆ ಅವರ ಹೆಸರು ಹೇಳುವ ನೈತಿಕ ಹಕ್ಕು ಯಾವತ್ತಿಗೂ ಮತ್ತೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೋಡಿ ಹೇಗೆ ಏಟು ಕೊಟ್ಟರು, ನನಗೆ ಈಲ್ಡ್ ಆಗಿದ್ದರೆ ನಾನು ನಿಮಗೆ ಅನುಕೂಲಕರವಾಗಿ ಹೇಳುತ್ತಿದ್ದೆ.

ಶ್ರೀ ಎ.ಕೆ. ಅನಂತಕೃಷ್ಣ:– ನಿಮಗೆ ಈಲ್ಡ್ ಆಗುವುದಕ್ಕೆ ಸಾಧ್ಯವೇ ಇಲ್ಲ. ಅವರಿಗೂ ನಿಮಗೂ ಅಜಗಜಾಂತರ ವ್ಯತ್ಯಾಸ ಇದೆ. ಅದನ್ನು ನನ್ನ ಕೈಯಲ್ಲಿ ಹೇಳಿಸಿಕೊಳ್ಳಬೇಕೇ ?

ಉಪಾಧ್ಯಕ್ಷರು:– ಬೇಡ ಬೇಡ ಅವರು ಮುಗಿಸಿಬಿಡಲಿ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ಅನಂತಕೃಷ್ಣ ಅವರ ಮಾತಿಗೆ ನಾನು ಯಾವತ್ತಿಗೂ ಕೂಡ ಬೆಲೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಇದು ರೆಕಾರ್ಡ್‌ಗೆ ಹೋಗುತ್ತಿದೆ, ಯಾವುದಕ್ಕೂ ಬೆಲೆ ಕೊಡುತ್ತೀರಾ ? ಏನೇ ಹೇಳಿದರೂ ಬೆಲೆ ಕೊಡುತ್ತೀರಾ ? ಏನೇ ಹೇಳಿದರೂ ಬೆಲೆ ಕೊಡುತ್ತೇನೆ ಎಂದರೆ ಹೇಗೆ ?

ಉಪಾಧ್ಯಕ್ಷರು:– ದಯವಿಟ್ಟು ಅವರು ಈಲ್ಡ್ ಆಗಿಲ್ಲ.

ಶ್ರೀ ಸಿ. ಬೈರೇಗೌಡ:– ಅವರು ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬಂದಿರತಕ್ಕಂಥವರು. ಆದರೆ ಈವತ್ತು ಬಹಳ ದುರಾದೃಷ್ಟ ಏತಕ್ಕೆಂದರೆ, ಹಾವನ್ನು ಹೊರಗಡೆ ಬಿಟ್ಟು ಹುತ್ತವನ್ನು ಬಡಿಯುತ್ತಿದ್ದಾರೆ. ಈ ಕೆಲಸ ಅನಂತಕೃಷ್ಣರವರು ಮಾಡುತ್ತಿರತಕ್ಕಂಥದ್ದು ಬಹಳ ದೌರ್ಭಾಗ್ಯ ಎಂದು ಅವರ ಗಮನಕ್ಕೆ ತರುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ತಮ್ಮ ಅರ್ಥ ಹೀನತೆಯನ್ನು ಅರ್ಥ ಮಾಡಿಕೊಂಡು ನಾನು ಸಂಕಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ. ನಾನು ನನ್ನ ದೇಶದ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ. ನಮ್ಮ ರಾಷ್ಟ್ರದ ವಿಷಯದಲ್ಲಿ ಹೇಳುತ್ತಿದ್ದೇನೆ. ರಾಷ್ಟ್ರದ ಐಕ್ಯತೆ ವಿಷಯದಲ್ಲಿ ಜಾತ್ಯಾತೀತ ವಿಷಯದಲ್ಲಿ ಮಾತ್ರ ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಭಾರತೀಯ ಜನತಾ ಪಾರ್ಟಿಯವರು ಏನು ಇವತ್ತು ಇಡೀ ರಾಷ್ಟ್ರದಲ್ಲಿ ಬೆಂಕಿ ಹತ್ತಿ ಉರಿಯತಕ್ಕಂತಹ ಒಂದು ಘಟನೆ ತಂದು ಇಟ್ಟಿದ್ದಾರೆ ಆ ವಿಷಯದಲ್ಲಿ ಹೇಳುತ್ತಿದ್ದೇನೆ. ಅವರ ಭವಿಷ್ಯದಿಂದ ಇವತ್ತಿನ ರಾಜಕೀಯ ಭವಿಷ್ಯದಿಂದ ರಾಷ್ಟ್ರದ ಭವಿಷ್ಯ ಏನು ಆಯಿತು ? ಈ 80

ಕೋಟಿ ಜನರು ಏನಾಗಿದ್ದಾರೆ. ಸುಮಾರು 12–15 ಪರ್ಸೆಂಟ್ ಜನರ ಭವಿಷ್ಯ ಏನಾಗುತ್ತಿದೆ ಎಂದು ಹೇಳಿ .....

ಶ್ರೀ ವಾಟಾಳ್ ನಾಗರಾಜ್:– ಇವರು ನಿಮ್ಮನ್ನು ದಾರಿ ತಪ್ಪಿಸುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ತಾವು ಆ ಕಡೆ ನೋಡಲೇಬೇಡಿ. ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:– ತಾವು ಆ ಕಡೆ ನೋಡಿದರೆ ಕಾಂಗ್ರೆಸ್ ಬಿಟ್ಟು ಮತ್ತೆ ನಿಮ್ಮ ಹಳೆಯ ಪಕ್ಷದ ನೆನಪು ಬರುತ್ತದೆ.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಹಳೆಯ ಪಕ್ಷದಿಂದಲೇ ಕಾಂಗ್ರೆಸ್‌ಗೆ ಬಂದಿದ್ದುದು. ಸಮಾಜವಾದವನ್ನು ಕಾಂಗ್ರೆಸ್ ಪಕ್ಷ ಒಪ್ಪಿಕೊಂಡಿತು ಅಂದ ಮೇಲೆ ನಾವು ಆ ಪಕ್ಷಕ್ಕೆ ಬಂದಿದ್ದುದು.

ಶ್ರೀ ವಾಟಾಳ್ ನಾಗರಾಜ್:– ಸಮಾಜವಾದವನ್ನು ಅವರು ಬರೀ ಒಪ್ಪಿಕೊಂಡರು ಅಷ್ಟೇ. ಆದರೆ ಅಲ್ಲಿ ಸಮಾಜವಾದ ನಡೆಯುತ್ತಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:– ಅದಕ್ಕೆ ನಾನು ಏನು ಹೇಳುತ್ತಿದ್ದೆ ಅಂದರೆ ಈ ಒಂದು ಸೆಕ್ಯುಲಾರಿಜಂ ಎಂದು ಏನು ಹೇಳುತ್ತಾರೆ, ಅದು ಕಾಂಗ್ರೆಸ್ ಪಕ್ಷಕ್ಕೆ ಇದೆ. ಅದಕ್ಕೆ ಒಂದು ರಾಜಕೀಯ ಶಕ್ತಿ ಇದೆ, ಜಾತ್ಯಾತೀತ ಒಂದು ಶಕ್ತಿ ಇದೆ. ಆ ಶಕ್ತಿಯನ್ನು ನೋಡಿಯೇ ನಾನು ಈ ಪಕ್ಷದಲ್ಲಿ ಬಂದಿದ್ದುದು.

ಶ್ರೀ ವಾಟಾಳ್ ನಾಗರಾಜ್:– ಇನ್ನೂ ತಾವು ನಂಬಿದ್ದೀರಾ ?

ಶ್ರೀ ಎ.ಕೆ. ಅನಂತಕೃಷ್ಣ:– ಇನ್ನೂ ನಂಬಿದ್ದೇನೆ ನಾಳೆಯೂ ನಂಬುತ್ತೇನೆ. ನಿಮ್ಮನ್ನು ನಂಬಿಕೊಂಡು ಕೆಡುವುದಕ್ಕಾಗುತ್ತದೆಯೇ ? ಈ ದೇಶವನ್ನು ಹಾಳು ಮಾಡುವುದಕ್ಕಾಗುತ್ತದೆಯೇ ? ಮತ್ತೆ ನಮ್ಮ ಧರ್ಮದ ವಿಷಯ ನಮ್ಮ ಸ್ನೇಹಿತರು ಏನು ಹೇಳಿದರೆಂದರೆ ಹಿರಿಯರು ನಮ್ಮ ಧರ್ಮ ರಿಲಿಜಿಯಸ್ ಟಾಲೆರೆನ್ಸ್, ಹೇಗೆ ಇರಬೇಕು, ಕಮ್ಯುನಲ್ ಟಾಲೆರೆನ್ಸ್, ಹೇಗೆ ಇರಬೇಕು ಈ ರಾಷ್ಟ್ರದ ಹಾರ್ಮನಿ ಹೇಗೆ ಇರಬೇಕು, ಆ ಒಂದು ಸಂಸ್ಕೃತಿ ಸಾವಿರಾರು ವರ್ಷಗಳಿಂದ ಯಾವ ತರಹ ಬಂದಿದೆ ಅಂತಹ ಒಂದು ಅಹಿಂಸಾತ್ಮಕ ವಾದದಿಂದ, ಒಂದು ರಾಷ್ಟ್ರದ ವಿಷಯವಾಗಿ ಏನೇನು ಹೇಳಿದ್ದಾರೆ ಅದರ ವಿಷಯ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಭಾರತೀಯ ಜನತಾ ಪಕ್ಷದವರು ಅದನ್ನು ಕೈಬಿಟ್ಟಿದ್ದಾರೆ ಎನ್ನುವುದಕ್ಕಿಂತ ಅದನ್ನು ಒಪ್ಪಿಕೊಂಡೇ ಇಲ್ಲವೆಂದು ನನ್ನ ಭಾವನೆ. ಅದನ್ನು ಒಪ್ಪಿಕೊಂಡಿದ್ದರೆ ಅವರು ಇಷ್ಟರ ಮಟ್ಟಿಗೆ ಹೋಗಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಯಾವುದೋ ಒಂದು ಸಂದರ್ಭದಲ್ಲಿ ಕೆಲವು ಸಮಾಜವಾದಿಗಳು ಸಹಕಾರ ಕೊಟ್ಟರು. ಅವರ ಜೊತೆಯಲ್ಲಿ ಕೆಲಸ ಮಾಡಿದರು. ಹಾಗೆಯೇ ಕಾಂಗ್ರೆಸ್ ಪಕ್ಷದಲ್ಲಿ ಕೆಲವರು ಕೆಲವೊಂದು ಸಂದರ್ಭದಲ್ಲಿ ಅವರ ಜೊತೆ ಇದ್ದರು. ಇಷ್ಟೆಲ್ಲಾ ಇದ್ದರೂ ಕೂಡ ಅವರಿಗೆ ಎಳ್ಳಷ್ಟು ಸೆಕ್ಯುಲರ್ ಕ್ಯಾರೆಕ್ಟರ್ ಬಂದಿದ್ದೆ ಆಗಿದಿದ್ದರೆ ಸಮಾಜವಾದದ ಒಂದು ಸಿದ್ಧಾಂಥದ ಆಧಾರದ ಮೇಲೆ ನಮ್ಮ ಜೀವನ ಹೇಗೆ ನಡೆಯಬೇಕು ಎನ್ನುವಂಥದ್ದನ್ನು ತಿಳಿದುಕೊಂಡಿಲ್ಲ. ಅದಕ್ಕೆ ಇವತ್ತು ಭಾರತೀಯ ಜನತಾ ಪಕ್ಷ ಈ ಒಂದು ಘಟ್ಟಕ್ಕೆ ಮುಟ್ಟಿದೆ. ಇದನ್ನು ತಡೆಗಟ್ಟಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ನನಗೆ ಒಂದು ಮಾತು ಕೇಳಿ ಬಂತು. ಕಲ್ಯಾಣ್ ಸಿಂಗ್ ಸರ್ಕಾರವನ್ನು ಅವರು ರಾಜೀನಾಮೆ ಕೊಟ್ಟ ಮೇಲೂ ಕೂಡ ಡಿಸ್‌ಮಿಸ್ ಮಾಡಿದ್ದಾರೆ ಅಂತ. ಇದು ನನ್ನ ಭಾವನೆಯಲ್ಲಿ ಕಲ್ಯಾಣಸಿಂಗ್ ರಾಜೀನಾಮೆ ಕೊಡಬೇಕಾದರೆ It was a premptive attempt to prevent dismissal or pass through the ignominy of being a dismissed Government for an illegal and immoral action taken by that Government as against the national interest..... ಎಂದು

ನನ್ನ ಭಾವನೆ. ಏಕೆಂದರೆ ಅವರು ಹಾಗೆ ಮಾಡಿದ ತಕ್ಷಣ ಈ ದೇಶಕ್ಕೆ ಅವರು ದೊಡ್ಡ ಹೀರೋ ಆಗುವಂತಹ ಅವಕಾಶ ಮಾಡಿ ಕೊಟ್ಟರೆ ನಮ್ಮ ದೇಶದ ಜನತೆ ಮತ್ತೆ ಆ ಒಂದು ನಾಯಕತ್ವ ಸರಿಯಾಗಿಯೇ ನಡೆದುಕೊಂಡಿದೆಯೆಂದು ತಪ್ಪು ಕಲ್ಪನೆಗೆ ಬರುತ್ತಾರೆ. ಅವರ pretentions ಇತ್ತು sympathy for Babri Masjid from being demolished. ಅದನ್ನು ತೊಡೆದು ಹಾಕಬೇಕಾದದ್ದು ನಮ್ಮ ಕರ್ತವ್ಯ ಆಗಿತ್ತು. ಇನ್ನೊಂದು, ತಪ್ಪಿತಸ್ಥರು ಕ್ಷಮೆ ಕೇಳಿದಾಕ್ಷಣ ಕೈ ಬಿಡುವುದಾದರೆ ತಪ್ಪಿತಸ್ಥರೆಲ್ಲಾ ಕ್ಷಮೆ ತೆಗೆದುಕೊಂಡು ಆದ ಮೇಲೆ ಚೆನ್ನಾಗಿ ನಡೆದುಕೊಳ್ಳುತ್ತಾರೆ ಎಂದು ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. Knowing the character of this BJP leadership, its ulterior motives and its Government's motives in four States, it was only proper that the Prime Minister and the Central Cabinet took action to dismiss that Government ignoring the resignation letter that was given to. ಇದನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ 3 ರಾಜ್ಯಗಳ ಸರ್ಕಾರಗಳನ್ನು ಡಿಸ್‌ಮಿಸ್ ಮಾಡಿದ್ದುದು ಪ್ರಜಾಪ್ರಭುತ್ವಕ್ಕೆ ರಾಜ್ಯಾಂಗಕ್ಕೆ ಮತ್ತು ಸೆಂಟರ್ ಸ್ಟೇಟ್ ರಿಲೇಶನ್‌ಗೆ ಧಕ್ಕೆ ಬಂದಿದೆ ಎನ್ನುವ ವಾದ ಸರಿಯಲ್ಲ. ಮೊನ್ನೆಯ ಪರಿಸ್ಥಿತಿ ಏನಾಗಿತ್ತು? ರಾಷ್ಟ್ರದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ ರಾಷ್ಟ್ರದ ಏಕತೆಯನ್ನು ಉಳಿಸಿಕೊಳ್ಳಬೇಕಾದರೆ ರಾಷ್ಟ್ರದ ಜಾತ್ಯಾತೀತ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಮತ್ತು ಈ ಒಂದು ಅಲ್ಪಸಂಖ್ಯಾತರ ಭವಿಷ್ಯವನ್ನು ನಾವು ಕಾಪಾಡಬೇಕಾದರೆ, ಅವರ ಗೌರವದ ನಾಗರೀಕತ್ವವನ್ನು ರಾಜ್ಯದಲ್ಲಿ ಉಳಿಸಿಕೊಳ್ಳಬೇಕಾದರೆ, ಏನು ಮಾಡಬೇಕಾಗಿತ್ತು ಎಂಬುದನ್ನು ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. A wolf in a sheep flock ಎಂದು ಹೇಳುತ್ತಾರಲ್ಲಾ ಆ ರೀತಿ ನಾವು ಕಾನ್ಸ್ಟ್ಟ್ಯೂಷನ್ ಪರವಾಗಿರುತ್ತೇವೆಂದು ತಾವು ಏನು ಒಂದು ಬ್ಯಾನ್ ಆರ್ಡರ್ ಮಾಡಿದ್ದೀರೋ ಆ ಬ್ಯಾನ್ ಆರ್ಡರ್‌ನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದ ತಕ್ಷಣ ಯಾವ ರೀತಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಒಡೆಯುವುದಕ್ಕೆ ಬಿಡುವುದಿಲ್ಲ ಕೇವಲ ಒಂದು ಸಿಂಬಾಲಿಕ್ ಕಾರ್‌ಸೇವೆ ಮಾಡುತ್ತೇವೆಂದು ಹೇಳಿ ಅವರ ನಾಲಿಗೆಯನ್ನು ತಪ್ಪಿದರೋ, ಅವರನ್ನು ಮತ್ತೆ ನಂಬಲಿಕ್ಕೆ ಸಾಧ್ಯವಾಗುತ್ತದೆಯೇ? ಈ 4 ರಾಜ್ಯಗಳಲ್ಲಿ ಅಕ್ರಮ ಮತ್ತೆ ನಡೆಯದೆ ಹೋಗಲಿ, ಈ ರಾಷ್ಟ್ರವನ್ನು ಕಾಪಾಡಬೇಕು, ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಪಾಡಬೇಕು, ರಾಷ್ಟ್ರದ ಜಾತ್ಯಾತೀತ ವ್ಯಕ್ತಿತ್ವವನ್ನು ಕಾಪಾಡಬೇಕು, ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಬೇಕು ಎನ್ನುವ ಒಂದೇ ಒಂದು ದೃಷ್ಟಿಯಲ್ಲಿ ನಮ್ಮ ಕೇಂದ್ರ ಸರ್ಕಾರ ಮಾಡಿದ್ದುದು ಸರಿ ಎನ್ನುವ ಮಾತನ್ನು ನಾವು ಈ ಸದನದ ಮೂಲಕ ಒಪ್ಪಿಕೊಳ್ಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಮತ್ತೆ ಅಲ್ಲಿ ಚುನಾವಣೆಗಳು ಆಗುವುದಿಲ್ಲವೆ, ಮುಂದೆ ನಡೆಯುವುದಿಲ್ಲವೆ? ಆಗುತ್ತದೆಯೇ? ಯಾವಾಗ?

ಶ್ರೀ ಎ.ಕೆ. ಅನಂತಕೃಷ್ಣ:– ಹೇಳುತ್ತೇನೆ, ಚುನಾವಣೆ ನಡೆಯುವಂಥ ಸನ್ನಿವೇಶ ಬಂದು, ಸಂದರ್ಭ ಬಂದು ನಡೆಯುವ ಕಾಲಕ್ಕೆ ಮತ್ತೆ ಬಿ.ಜೆ.ಪಿ. ಬರಲೇಬಾರದು ಎನ್ನುವ ರೀತಿಯಲ್ಲಿ ಇಡೀ ಭಾರತ ಜನಕ್ಕೆ ತಿಳುವಳಿಕೆ ಕೊಡುವ ಕೆಲಸ ಮಾಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಬಿ.ಜೆ.ಪಿ. ಬರುತ್ತದೆಯೋ ಕಾಂಗ್ರೆಸ್ ಬರುತ್ತದೆಯೋ ಆ ಪ್ರಶ್ನೆ ಬೇರೆ.

ಶ್ರೀ ಎ.ಕೆ. ಅನಂತಕೃಷ್ಣ:– ಕಾಂಗ್ರೆಸ್ ನಾನು ಹೇಳಲಿಲ್ಲ. ಬಿ.ಜೆ.ಪಿ. ಬರದ ಹಾಗೆ ಕೆಲಸ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಮತ್ತೆ ಚುನಾವಣೆ ಆಗುತ್ತದೆಯೇ?

ಶ್ರೀ ಎ.ಕೆ. ಅನಂತಕೃಷ್ಣ:– ಚುನಾವಣೆ ಆಗಿಯೇ ಆಗುತ್ತದೆ. ಇಲ್ಲದೆ ಹೋದರೆ ನೀವು ಈ ಸದನದಲ್ಲಿ ಬರಬೇಕಲ್ಲಾ ? ಚುನಾವಣೆ ಆಗುತ್ತದೆ. ಚುನಾವಣೆ ನಡೆಸದೇ ಇರುವಂಥ ಭ್ರಷ್ಟ ಪಕ್ಷ ನಮ್ಮದಲ್ಲ.

ಶ್ರೀ ಸಿ. ಬೈರೇಗೌಡ:– ಮಾನ್ಯ ನರಸಿಂಹರಾವ್‌ರವರು ಮಾತನಾಡುತ್ತಿದ್ದಾರೋ ? ಅನಂತಕೃಷ್ಣರವರು ಮಾತನಾಡುತ್ತಿದ್ದಾರೋ ಗೊತ್ತಾಗುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಈ ಸದನದ ಒಬ್ಬ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ಅದನ್ನು ಅರ್ಥ ಮಾಡಿಕೊಳ್ಳಿ ಸಾಕು. ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆ ಮೇಲೆ ನಂಬಿಕೆ ಇಲ್ಲದೆ ಹೋಗಿದ್ದರೆ ಅಸ್ಸಾಮ್‌ನಲ್ಲಿ ಸೋಲುವಂಥ ಪರಿಸ್ಥಿತಿ ಇದ್ದರೂ ಕೂಡ ಚುನಾವಣೆ ನಡೆಸುತ್ತಿರಲಿಲ್ಲ. ಪಂಜಾಬ್‌ನಲ್ಲಿ ಸೋಲುವಂಥ ಪರಿಸ್ಥಿತಿಯಲ್ಲೂ ಚುನಾವಣೆ ನಡೆಸುತ್ತಿರಲಿಲ್ಲ. ಇದನ್ನು ತಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:– ಲೋಕಸಭೆಯ ಉಪಾಧ್ಯಕ್ಷರು ಯಾರು ? ಎಲ್ಲಿಂದ ಚುನಾಯಿತರಾದರು ? ಯಾರು ಚುನಾಯಿಸಿದರು ಅವರನ್ನು ?

ಶ್ರೀ ಎ.ಕೆ. ಅನಂತಕೃಷ್ಣ:– ಇದು ನಮ್ಮನ್ನು ಕೇಳುವಂಥ ಪ್ರಶ್ನೆಯೇ ?

ಶ್ರೀ ಆರ್.ವಿ. ದೇಶಪಾಂಡೆ:– ಹಾಗೆ ಕೇಳಬಾರದಾಗಿತ್ತು ಅವರಿಗೆ. ಲೋಕಸಭೆಯಲ್ಲಿ ಉಪಾಧ್ಯಕ್ಷರನ್ನು ಯಾರು ಮಾಡಿದರು ಎಂದು ಕೇಳಬೇಕಾಗಿತ್ತು.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ, ಹಿಂದಿನ ಒಕ್ಕೂಟದ ಸೋವಿಯತ್ ಯೂನಿಯನ್, ಯೂರೋಪಿನಲ್ಲಿ ಜಿ.ಡಿ.ಆರ್., ಆ ಕಡೆ ಹೋದಾಗ ...

ಶ್ರೀ ವಾಟಾಳ್ ನಾಗರಾಜ್:– ಆ ರಾಷ್ಟ್ರಗಳಲ್ಲೂ ಸಹಾ ಯುಗಯುಗಾಂತರಗಳಿಂದ ಏನೇನೋ ಆಗಿಹೋಗಿವೆ. ಈ ಹಳೇ ಕತೆ ಏಕೆ ಬೇಕು ? ರಷ್ಯನ್ ಗತಿ ಏನಾಗಿದೆ ? ಅಮೆರಿಕಾ ಗತಿ ಏನು ? ಆ ಅಧ್ಯಕ್ಷರುಗಳ ಗತಿ ಏನಾಗಿದೆ ?

ಶ್ರೀ ಎ.ಕೆ. ಅನಂತಕೃಷ್ಣ:– ತಾಳ್ಮೆಯಿಂದ ಕೇಳಿ. ಆಗ ನಮಗೆ ಒಂದು ಮುನ್ನೆಚ್ಚರಿಕೆ ಕೊಡುತ್ತಿದ್ದರು. ಮಲ್ಟಿ ನ್ಯಾಷನಲ್ ಆರ್ಗನೈಸೇಷನ್ಸ್‌ಗಳು ನಿಮ್ಮ ಭಾರತದಲ್ಲಿ ಡೀಸ್ಟೆಬಿಲೈಸೇಷನ್ ತರುವಂಥ ಸನ್ನಿವೇಶಗಳನ್ನು ನಾವು ಕಾಣುತ್ತಿದ್ದೇವೆ. ಡೀಸ್ಟೆಬಿಲೈಸೇಷನ್ ಮಾಡುವಂಥ, ಕುಯುಕ್ತಿಗಳನ್ನು ಎದುರಿಸುವಂಥ ಒಂದು ಶಕ್ತಿಯನ್ನು ನೀವು ಪಡೆಯಬೇಕೆಂದು ಹೇಳುತ್ತಿದ್ದರು. ನಾವೆಲ್ಲಾ ಸೇರಿ ಹೋರಾಟ ಮಾಡೋಣವೆಂದು ಹೇಳುತ್ತಿದ್ದೇನೆ. ಸಮಾಜವಾದಿ ರಾಷ್ಟ್ರಗಳ ನಿಲುವು ಅದೇ ಆಗಿತ್ತು. ಭಾರತದ ನಿಲುವೂ ಅದೇ ಆಗಿತ್ತು. ಯಾವ ಒಂದು ಆಂಗ್ಲೋ ಅಮೆರಿಕನ್ ಇಂಪೀರಿಯಲಿಸ್ಟಿಕ್ ಮತ್ತು ಮನೋಪಲಿ ಫೋರ್ಸ್‌ಸ್ ಏನಿತ್ತು ? international ಕಾರ್ಟಿಸ್ಟ್ ಅವರ ವಿರುದ್ಧ ಮಾಡಬೇಕಾಗಿತ್ತು. ಆಗ de–stabilisation character ನಾನಾ ರೀತಿಯಲ್ಲಿ ನಮ್ಮ ರಾಷ್ಟ್ರಕ್ಕೆ ಭಯೋತ್ಪಾದನೆಯಾದಂಥ ರೀತಿಯಲ್ಲಿ ಕಾಣುತ್ತಿದೆ. ಆದರೆ ಅದಕ್ಕೆ ಮುಂಚಿತವಾಗಿ ನಮ್ಮ ರಾಷ್ಟ್ರದ ಡೀಸ್ಟೆಬಿಲೈಸೇಷನ್ ಅನ್ನು ಈ communal fundamentalist forces ಮಾಡುವಂಥ ಪ್ರಯತ್ನ ಮಾಡುತ್ತಿದೆ. ಆ ವಿಷಯದಲ್ಲಿ ನಾವು ಯಾವುದೇ ಪಕ್ಷದವರಾದರೂ ಕೂಡಾ ನಾವು ಜಾತ್ಯಾತೀತ ಪಕ್ಷವಾಗಿ ಇದನ್ನು ಎದುರಿಸುವಂಥ ಕೆಲಸದಲ್ಲಿ ಮಗ್ನರಾಗಬೇಕು. ಕಾಂಗ್ರೆಸ್‌ನಲ್ಲಿ ಕೆಲವು ಹುಳುಕು ಹುಡುಕುವುದು, ಬಿ.ಜೆ.ಪಿ.ಯಲ್ಲಿ ಕೆಲವು ಹುಳುಕನ್ನು ಹುಡುಕುವುದು ಮತ್ತು ಅವರು ಸರಿಯಿಲ್ಲ, ಇವರು ಸರಿಯಲ್ಲ, ನಾವೇ ಸರಿ ಎನ್ನುವ ಮಾತನ್ನು ಹೇಳುತ್ತಾ ಹೋಗಿಯೆಂದು ಹೇಳಿದರೆ ಕಡೆಗೆ

4.45 ಪಿ.ಎಂ

ಯಾರಿಗೆ ಯಾವ ಭಾಗ ಎಲ್ಲಿಗೆ ಸಿಗುತ್ತದೆ ಎನ್ನುವ ಮಾತನ್ನು ನಾವು ಯೋಚನೆ ಮಾಡಬೇಡವೇ ? ನಮ್ಮ ಗಮನದಲ್ಲಿ ಇರಬೇಕಾದುದು ಒಂದೇ ಒಂದು. ನಮ್ಮ ರಾಷ್ಟ್ರದ ಏಕತೆ, ಐಕ್ಯತೆ, ಭದ್ರತೆ ಮತ್ತು ರಾಷ್ಟ್ರದ ಜಾತ್ಯಾತೀತವಾದ ನಿಲುವು ಏನಿದೆ ? ನಮ್ಮ ಸಂಸ್ಕೃತಿ ಏನಿದೆ ? ಅಂತರರಾಷ್ಟ್ರೀಯ ಮಟ್ಟದಲ್ಲಿ ನಮಗೆ ಯಾವ ಒಂದು ಅತೀವವಾದ ಗೌರವ ಸಿಕ್ಕಿದೆ ? ಅದನ್ನು ಕಾಪಾಡಿಕೊಳ್ಳಬೇಕೆಂದರೆ ಈ ಜಾತೀಯತೆಗೆ ಸಂಬಂಧಪಟ್ಟಂಥ ಮತೀಯತೆಗೆ ಸಂಬಂಧಪಟ್ಟಂಥ ಈ ದುರ್ಜನಗಳ ಸಂಘಟನೆಯ ಪಕ್ಷಗಳು ಏನಿವೆ ಅದರ ವಿರುದ್ಧ ಹೋರಾಟ ಮಾಡಬೇಕಾಗಿದ್ದುದು ನಮ್ಮ ಮೂಲಭೂತ ಕರ್ತವ್ಯವಾಗಿದೆ. ಆದುದರಿಂದ ಇದನ್ನು ಬಹಳ ಲೈಟ್ ಹಾರ್ಟೆಡ್ ಎಂದು ಹೇಳುತ್ತೇವಲ್ಲಾ ಆ ರೀತಿಯಾಗಿ ಎಂದು ತೆಗೆದುಕೊಂಡು ರಾಜಕೀಯ ಮಾಡುವಂಥ ಮತ್ತು fishing in troubled waters ಎನ್ನುವಂತಹ ಕೆಲಸ ಮಾಡುವುದು ಬೇಡ ಎಂದು ಬಹಳ ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಯಾವುದೋ ಒಂದು ಸಂದರ್ಭದಲ್ಲಿ ನಮ್ಮ ಪಕ್ಷವು ಬಿಜೆಪಿಯವರ ಜತೆಗೆ ಹೊಂದಾಣಿಕೆ ಮಾಡಿಕೊಂಡಿರಬಹುದು. ಆದರೆ ಪರಿಸ್ಥಿತಿಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಹಿಂದಿನ ಲೋಪದೋಷಗಳು ಏನೇ ಇರಬಹುದು, ಆದರೆ ಅವರಿಗೆ ನಾವು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟೆವು, ಬೆಳೆದ ನಂತರ ಏನು ಈ ರಾಷ್ಟ್ರಕ್ಕೆ ಆಪಘಾತ ಬರುತ್ತಾ ಇದೆ ಅದಕ್ಕೆ ನಾವು ಕಾರಣಕರ್ತರಾಗಿದ್ದೇವೆ. ಆದರೆ ಇವತ್ತು ನಮ್ಮ ರಾಷ್ಟ್ರಕ್ಕೆ ಯಾವ ಅಧೋಗತಿ ಪರಿಸ್ಥಿತಿ ಬರುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ, ನಾನು ಜನತಾ ಪಕ್ಷದವರಲ್ಲಿಯೂ, ಸಮಾಜವಾದಿ ಜನತಾ ಪಕ್ಷದವರಲ್ಲಿಯೂ ಹೇಳುತ್ತೇನೆ. ದಯಮಾಡಿ ಇದರ ತೀವ್ರತೆಯನ್ನು ಅರ್ಥ ಮಾಡಿಕೊಳ್ಳಿ. ನಮ್ಮ ಪ್ರಧಾನಿಯವರು ಆ ಪಕ್ಷಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಜಾತ್ಯಾತೀತ ಪಕ್ಷಗಳ ಜೊತೆ ಕೆಲವು ಕಾರ್ಯಕ್ರಮಗಳನ್ನು ಇಟ್ಟಿದ್ದಾರೆ. ಪ್ರತಿ ಜಾತಿವಾದಿ ಪಕ್ಷಗಳ ವಿರುದ್ಧ ಹೋರಾಟ ಮಾಡಬೇಕೆಂದು ಹೇಳಿದ್ದಾರೆ. ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಯಾವುದೇ ರಾಷ್ಟ್ರದಲ್ಲಿ, ಯಾವುದೇ ರಾಜಕೀಯ ಪಕ್ಷ ಯಾವುದೇ ಧರ್ಮವನ್ನು ಕಾಪಾಡಿಕೊಂಡು, ಬೆಳೆಸಿಕೊಂಡು ಬಂದಂಥ ಸನ್ನಿವೇಶಗಳು ಇತಿಹಾಸದಲ್ಲಿ ಇಲ್ಲ. ಧರ್ಮ ಮತ್ತು ರಾಜಕೀಯಗಳು ಎಂದೂ ಸೇರಿಲ್ಲ. ಧರ್ಮ ಸರಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಂಥ ಕಾಲದಲ್ಲಿ ಯುದ್ಧಗಳು ನಡೆದು ಲಕ್ಷಾಂತರ ಜನರ ಸಂಹಾರವೂ ಆಗಿಹೋಗಿದೆ. ಅಂಥ ರಾಷ್ಟ್ರಗಳೆಲ್ಲಾ ನಿರ್ನಾಮವಾಗಿದೆ. ಆದರೆ ಭಾರತದಲ್ಲಿ ಅಂಥ ವಿಶೇಷ ಪರಿಸ್ಥಿತಿ ಏನೂ ಇಲ್ಲ, ಇವೊತ್ತು ಯಾವುದೇ ರಾಜಕೀಯ ಪಕ್ಷಗಳು ಧರ್ಮವನ್ನು ಕಾಪಾಡುತ್ತೇವೆ, ಈ ರಾಷ್ಟ್ರದಲ್ಲಿ ಧರ್ಮದ ರಾಜಕಾರಣವನ್ನು ನಾವು ನಿರ್ಮಾಣ ಮಾಡುತ್ತೇವೆಂದು ಹೇಳಿದರೆ, ಯಾವ ಪರದೇಶಗಳಲ್ಲಿ ಧರ್ಮದ ಆಧಾರದ ಮೇಲೆ, ಧರ್ಮದ ಹೆಸರಿನಲ್ಲಿ ರಾಷ್ಟ್ರವನ್ನು ಕೈಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಅಲ್ಲೋಲಕಲ್ಲೋಲವಾಯಿತೋ ಅಂಥ ಒಂದು ಪರಿಸ್ಥಿತಿಯು ನಮ್ಮಲ್ಲಿಯೂ ಬರುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ನಾವುಗಳು ಯಾರೂ ಅವಕಾಶ ಕೊಡಬಾರದು. ಧರ್ಮದ ಹೆಸರಿನಲ್ಲಿ ಜಾತಿವಾದಿ ಪಕ್ಷಗಳು ಆಡಳಿತಕ್ಕೆ ಬರದ ರೀತಿಯಲ್ಲಿ ನಾವು ತೀವ್ರವಾಗಿ ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಮತ್ತೆ ಈ ವಿಚಾರದಲ್ಲಿ ನಮ್ಮ ಜನತೆಯನ್ನು ಜಾಗೃತಗೊಳಿಸಬೇಕಾದುದು ನಮ್ಮ ಆದ್ಯಕರ್ತವ್ಯವಾಗಿದೆ, ಈ ರಾಜಕೀಯ ಗೊಂದಲವನ್ನುಂಟು ಮಾಡಿ ಜನಜಾಗೃತಿಗೆ ತಡೆ ಹಾಕುವುದು ಸೂಕ್ತವಲ್ಲ. ಜಾಗೃತಿಯನ್ನು ಜನರಲ್ಲಿ ಉಂಟು ಮಾಡಿ ದೇಶದಾದ್ಯಂತ ಜನಜಾಗೃತಿಯನ್ನು ಎಬ್ಬಿಸಿ, ದೇಶಕ್ಕೆ ಮಾರಕವಾದಂಥ ಅಕ್ರಮವನ್ನು ಯಾರು ಮಾಡುತ್ತಿದ್ದಾರೆ ಅವರ ವಿರುದ್ಧ ಜಾಗೃತ ಜನತೆಯನ್ನು ನಿಲ್ಲಿಸಬೇಕಾದುದು ನಮ್ಮೆಲ್ಲರ ಮೂಲ ಕರ್ತವ್ಯವಾಗಿದೆ. ಇದರಲ್ಲಿ ನಾವೆಲ್ಲರೂ ಭಾಗಿಯಾಗೋಣ. ನಮ್ಮ ದೇಶದಲ್ಲಿ ನಮ್ಮ ರಾಜ್ಯಾಂಗದಲ್ಲಿ ಏನು ಹೇಳುತ್ತಾರೆ, ಸಮಾಜವಾದ, ಪ್ರಜಾಪ್ರಭುತ್ವ, ಜಾತ್ಯಾತೀತತೆ, ಮತ್ತು ಸೆಲ್ಫ್‌ರೆಲವೆನ್ಸ್, ಇವೆಲ್ಲಾ

Each one is a leave of the entire nation. ಇದರಲ್ಲಿ ಯಾವುದೇ ಒಂದು ಕಡಿವಾಣ ಆಯಿತು ಎಂದರೆ, ನಮ್ಮ ರಾಷ್ಟ್ರ ಅಪಘಾತಕ್ಕೆ ಕಾರಣವಾಗುತ್ತದೆ. ಆದ್ದರಿಂದ ರಾಜ್ಯಾಂಗದಲ್ಲಿ ನಮೂದಿತವಾದ ಎಲ್ಲವನ್ನೂ ನಾವು ಆಚರಣೆಯಲ್ಲಿ ತಂದು ಕಾಪಾಡಿಕೊಂಡು ಹೋಗಬೇಕಾಗಿದ್ದರೆ, ಇವೊತ್ತು ನಾವು ಜಾತ್ಯಾತೀತರಾಗಿ, ಮತಾತೀತರಾಗಿ ರಾಷ್ಟ್ರದ ಐಕ್ಯತೆಯನ್ನು ಕಾಪಾಡುವ ಕೆಲಸವನ್ನು ಮಾಡಬೇಕಾದುದು ಮುಖ್ಯವಾದ ಕೆಲಸವಾಗಿದೆ. ಆದ್ದರಿಂದ ನಮ್ಮ ರಾಷ್ಟ್ರದಲ್ಲಿ ರಾಜ್ಯದಲ್ಲಿ ಜಿಲ್ಲಾ ಮಟ್ಟದಲ್ಲಿ ಹಳ್ಳಿಗಳ ಮಟ್ಟದಲ್ಲಿ ಒಂದಾಗಿ ರಾಷ್ಟ್ರಘಾತುಕ ರಾಜಕೀಯ ಶಕ್ತಿಗಳನ್ನು ಹೊಡೆದೋಡಿಸಿ, ಸದ್ಭಾವನೆಯನ್ನು ಎಲ್ಲಾ ಕಡೆಗಳಲ್ಲಿ ಬಿತ್ತಿ ನಮ್ಮ ರಾಷ್ಟ್ರ ಒಂದು ಜಾತ್ಯಾತೀತ ರಾಷ್ಟ್ರವಾಗಿ ಬೆಳೆಯುವಂತೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ಧರ್ಮದ ಫಿಲಾಸಫಿ ಹೇಳಲಿಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಸಾಕಷ್ಟು ಹೇಳಿದ್ದಾರೆ, ಅದರ ಅವಶ್ಯಕತೆಯಿಲ್ಲ. ಆದರೆ ಒಂದು, ಪ್ರತಿಯೊಂದು ಧರ್ಮದ ಫಿಲಾಸಫಿ ಆದರೂ ಏನು? ಫಿಲಾಸಫಿ ಇಸ್ ಹ್ಯೂಮನಿಸಂ. ಆ ಹ್ಯೂಮನಿಸಂ ಅನ್ನುವುದಕ್ಕೆ ಅರ್ಥ ಏನಿದೆ? ಅಷ್ಟು ಮಟ್ಟಿಗೆ ತಾಳ್ಮೆ ಇಲ್ಲದ ಮಾನವೀಯತೆ, ಮಾನವೀಯತೆಯಾಗಿ ಇರಲಿಕ್ಕೆ ಸಾಧ್ಯವಿಲ್ಲ. ತಾಳ್ಮೆರಹಿತವಾದ ಒಂದು ರಾಜಕೀಯ ಪಕ್ಷ, ತಾಳ್ಮೆ ರಹಿತವಾದ ಧರ್ಮ ಅಂತ ಹೇಳಿಕೊಳ್ಳುವುದು ಅದು ಮಾನವನ ಆದರ್ಶ ಜೀವನಕ್ಕೆ ಭಂಗ ತರುವಂತಹ ಕೆಲಸ ಆಗಿರುತ್ತೆ. ಅದಕ್ಕೆ ನಾವು ತೀವ್ರ ವಿರೋಧ ವ್ಯಕ್ತಪಡಿಸಬೇಕೆಂದು ನಾನು ಹೇಳಬಯಸುತ್ತೇನೆ. ಅದರಲ್ಲೂ ನಮ್ಮ ರಾಷ್ಟ್ರ ಇಂದು ಸಾಮಾಜಿಕವಾಗಿ ಆರ್ಥಿಕವಾಗಿ ಪ್ರಗತಿ ಸಾಧಿಸಬೇಕಾಗಿದೆ, ಯಾವ ಸಾಮಾಜಿಕ ಆರ್ಥಿಕ ನ್ಯಾಯವನ್ನು ನಮ್ಮ ಜನರಿಗೆ ತಂದುಕೊಡಬೇಕಾಗಿದೆ ಅದರಲ್ಲಿ ನಾವು ಎಷ್ಟರಮಟ್ಟಿಗೆ ಫಲಕಾರಿಯಾಗಿದ್ದೇವೆ ವಿಫಲರಾಗಿದ್ದೇವೆ ಅನ್ನುವುದಕ್ಕಿಂತ ಹೆಚ್ಚಾಗಿ ಮುಂದಕ್ಕೆ ಹೆಜ್ಜೆ ಇಟ್ಟು ಫಲಕಾರಿಯಾದ ಪ್ರಯತ್ನ ನಾವು ಮಾಡಬೇಕಾಗಿದೆ ಅನ್ನೋ ಕಾಲದಲ್ಲಿ ಧರ್ಮಗಳ ಹೆಸರನ್ನು ಹೇಳಿ, ಪರಧರ್ಮಗಳ ವಿರುದ್ಧ ವಿಷಬೀಜ ಬೀರಿ ಮತ್ತು ಅದರ ಗಾಳಿಯನ್ನು ಬಳಸಿ ಇಡೀ ಭಾರತವನ್ನು ರಕ್ತಪಾತಕ್ಕೆ ಒಳಗಾಗಿಸುವುದು ಸೂಕ್ತವಲ್ಲ. ರಾಜ್ಯಗಳಲ್ಲಿ ಸುಮಾರು 70–80 ಭಾಗ ಜನ ಬಡತನದಲ್ಲಿ ನರಳುತ್ತಿದ್ದಾರೆ. ಅವರ ಕಡೆ ಗಮನ ಕೊಡುವುದನ್ನು ಬಹಳ ಮಾಡಬೇಕೆಂದು ಬಹಳ ಕಳಕಳಿಯಿಂದ ತಮ್ಮಲ್ಲಿ ಹೇಳಿ ಅಂತಿಮದಲ್ಲಿ ನಾನು ವೈಯಕ್ತಿಕವಾಗಿ ಯಾರ ಮನಸ್ಸನ್ನೂ ನೋಯಿಸುವ ಪ್ರಯತ್ನ ಮಾಡಿಲ್ಲ, ಯಾವುದೊಂದು ಧ್ಯೇಯದ ವಿಷಯದಲ್ಲಿ ನಾವು ನಮ್ಮ ರಾಷ್ಟ್ರವನ್ನು ಕಾಪಾಡಿಕೊಳ್ಳಬೇಕಾಗಿದೆ ಆ ಧ್ಯೇಯದ ಆಧಾರದ ಮೇಲೆ ನಾನು ಮಾತಾಡಿದ್ದೇನೆ. ಚರಿತ್ರೆ ನಮಗೆ ಪಾಠವನ್ನು ಕಲಿಸಿದೆ. ಅನುಭವ ಪಾಠ ಕಲಿಸಿದೆ, ಪ್ರಕೃತಿ ನಮಗೆ ಪಾಠ ಕಲಿಸಿದೆ, ಸತ್ಯದ ಅಂಶಗಳು ನಮಗೆ ಪಾಠ ಕಲಿಸಿದೆ ಇವನ್ನೆಲ್ಲ ನಾವು ಬಿಟ್ಟಿದ್ದೇ ಆದರೆ ನಾವು ಮಾನವರಾಗಿ ಈ ರಾಷ್ಟ್ರದ ನಾಗರೀಕರಾಗಿ ಉಳಿಯೋದಿಕ್ಕೆ ಸಾಧ್ಯವಾಗುವುದಿಲ್ಲ ಅನ್ನೋ ಮಾತನ್ನು ಹೇಳಿ ನಮ್ಮ ಜವಾಬ್ದಾರಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗುವುದಲ್ಲ ಎಂದು ಹೇಳಿ, ನನಗೆ ಕೆಲವು ಮಾತುಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೂ ನನ್ನ ಎಲ್ಲ ಸ್ನೇಹಿತರಿಗೂ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಈಗ ಒಂದು ಪ್ರಕಟಣೆ.